# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಆಗಸ್ಟ್ 19, 2022

ಸಂಪುಟ : 49 ಸಂಚಿಕೆ : 97 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಹಬ್ಬಗಳ ಆಚರಣೆ ಹಿಂದಿದೆ ಅಧ್ಯಾತ್ಮಿಕ ಚಿಂತನೆ

**ರಕ್ಷಾಬಂಧನ, ಶ್ರೀ ಕೃಷ್ಣ ಜನ್ಮಾಷ್ಟಮಿ, ಪತ್ರಕರ್ತರಿಗೆ ಅಭಿನಂದನಾ ಸಮಾರಂಭದಲ್ಲಿ ಬ್ರಹ್ಮಾಕುಮಾರಿ ಲೀಲಾಜಿ ಅಭಿಮತ**

ದಾವಣಗೆರೆ, ಆ. 18- ಭಾರತೀಯರು ಆಚರಿಸುವ ಎಲ್ಲಾ ಹಬ್ಬಗಳ ಹಿಂದೆ ಆಧ್ಯಾತ್ಮಿಕತೆಯ ಚಿಂತನೆ ಅಡಗಿದೆ. ಇಂದು ರಹಸ್ಯ ಮತ್ತು ಅರ್ಥವನ್ನು ಬಿಟ್ಟು ಆಡಂಬರದ ಆಚರಣೆಯನ್ನು ಮಾಡುತ್ತಿದ್ದೇವೆ. ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಿಶ್ಲೇಷಿಸಿದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಶಿವಧ್ಯಾನ ಮಂದಿರದ ಸಭಾಂಗಣದಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಇಂದು ಹಮ್ಮಿಕೊಂಡಿದ್ದ ರಕ್ಷಾಬಂಧನ, ಶ್ರೀ ಕೃಷ್ಣ ಜನ್ಮಾಷ್ಟಮಿ ಪತ್ರಕರ್ತರಿಗೆ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ರಕ್ಷಬಂಧನ ಶಬ್ಧದಲ್ಲಿ ಎರಡು ಪದಗಳಿವೆ. ರಕ್ಷಾ ಮತ್ತು ಬಂಧನ. ರಕ್ಷಾ ಎಂದರೆ ರಕ್ಷಣೆ ಮಾಡುವುದು ಮತ್ತು ಮಾಡಿಕೊಳ್ಳುವುದು. ಬಂಧನ ಎಂದರೆ ಕಟ್ಟುವುದು ಮತ್ತು ಕಟ್ಟಿಕೊಳ್ಳುವುದು. ವಾಸ್ತವದಲ್ಲಿ ಮನುಷ್ಯ ಯಾವ ಬಂಧನದಲ್ಲೂ ಇರಲು ಇಷ್ಟಪಡುವುದಿಲ್ಲ. ಆದರೆ ಈ ರಕ್ಷಾಬಂಧನ (ರಾಖಿ) ಹಬ್ಬದಲ್ಲಿ ಇಷ್ಟಪಟ್ಟು ರಾಖಿ ಕಟ್ಟಿಸಿಕೊಳ್ಳುತ್ತಾನೆ ಎಂದರು.

ಸಂಸಾರದ, ಲೌಖಿಕದ ಬಂಧನ, ಅಲೌಖಿಕ, ಈಶ್ವರೀಯ ಬಂಧನ ಪಾರಮಾರ್ಥಿಕ ಬಂಧನ ನೋಡುತ್ತೇವೆ. ಸಂಸಾರ ಬಂಧನದಲ್ಲಿ ದುಃಖ, ಅಶಾಂತಿ, ಚಿಂತೆ, ಭಯ, ಒತ್ತಡಗಳು ಹೆಚ್ಚಾಗುತ್ತಿವೆ. ಹೇ ಭಗವಂತ ಈ ಬಂಧನದಿಂದ (2ನೇ ಪುಟಕ್ಕೆ)

# ಪಕ್ಷ ಸಂಘಟನೆಯ ಹೊಣೆ ಬೊಮ್ಮಾಯಿ-ಕಟೀಲ್ ಹೆಗಲಿಗೆ

**ತಲಾ 50 ಕ್ಷೇತ್ರಗಳಲ್ಲಿ ಸಂಚರಿಸಿ ಪಕ್ಷ ಸಂಘಟಿಸಲು ಸೂಚನೆ**

ಬೆಂಗಳೂರು, ಆ. 18 - ಬಿಜೆಪಿ ದುರ್ಬಲವಾಗಿರುವ ನೂರು ಕ್ಷೇತ್ರಗಳಲ್ಲಿ ಪಕ್ಷವನ್ನು ಸಂಘಟಿಸಿ, ಮತದಾರರನ್ನು ಸೆಳೆಯುವ ಹೊಣೆಗಾರಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೆಗಲಿಗೆ ಪಕ್ಷ ಹಾಕಿದೆ.

ಮುಂಬರುವ ವಿಧಾನಸಭಾ ಚುನಾವಣಾ ತಯಾರಿಗೆ ಸಂಬಂಧಿಸಿದಂತೆ ಇಂದು ನಡೆದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಉಸ್ತುವಾರಿ ನೋಡಿಕೊಳ್ಳುವ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಈ ಹೊಣೆಗಾರಿಕೆ ವಹಿಸಿದ್ದಾರೆ.

ಉಭಯ ನಾಯಕರು ತಲಾ 50 ಕ್ಷೇತ್ರಗಳಲ್ಲಿ ಸಂಚರಿಸಿ, ಪಕ್ಷವನ್ನು ಸಂಘಟಿಸುವಂತೆ ಸೂಚಿಸಿದೆ. ಈ ಕಾರ್ಯ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲೇ ಪೂರ್ಣಗೊಳಿಸಬೇಕು ಎಂದು ಆದೇಶ ಮಾಡಿದ್ದಾರೆ.

ಬಿಜೆಪಿ ಆಡಳಿತ ಹಾಗೂ ಬಸವರಾಜ್ ಬೊಮ್ಮಾಯಿ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆಸಲಿರುವ ಜನೋತ್ಸವ ಕಾರ್ಯಕ್ರಮವನ್ನು ರಾಜ್ಯದ ಪ್ರಮುಖ 7 ಸ್ಥಳಗಳಲ್ಲಿ ನಡೆಸಲು ತೀರ್ಮಾನಿಸಿದೆ.

ಜನೋತ್ಸವ ಕಾರ್ಯಕ್ರಮದ ಮೂಲಕವೇ ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರವೂ ಪ್ರಾರಂಭವಾಗಲಿ. ಈ ಕಾರ್ಯಕ್ರಮಗಳನ್ನು ಬಹಳ ಯಶಸ್ವಿಗೊಳಿಸಬೇಕು, ಪ್ರತಿಯೊಂದು ಕಾರ್ಯಕ್ರಮಕ್ಕೂ 3 ರಿಂದ 5 ಲಕ್ಷ ಕಾರ್ಯಕರ್ತರನ್ನು ಸೇರಿಸಿ, ರಾಜ್ಯ ಮತ್ತು ಕೇಂದ್ರ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳನ್ನು ಜನರ ಮುಂದಿಡಬೇಕೆಂದು ಹೇಳಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅರುಣ್‌ಸಿಂಗ್, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕನಿಷ್ಟ ನೂರಾ ನಲವತ್ತೈದು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದು ಅಧಿಕಾರ ಹಿಡಿಯುವುದಾಗಿ ವಿಶ್ವಾಸ (4ನೇ ಪುಟಕ್ಕೆ)

# ಭೂ ಸ್ವಾಧೀನ ಕೈ ಬಿಡುವಂತೆ ಎಸ್ಸೆಸ್‌ಗೆ ಮನವಿ



ದಾವಣಗೆರೆ, ಆ.18- ತಾಲ್ಲೂಕಿನ ಮೆಳ್ಳೇಕಟ್ಟೆ, ಅಣಜಿ ಮತ್ತು ಲಿಂಗಾಪುರ ಗ್ರಾಮಗಳಲ್ಲಿ ಕೈಗಾರಿಕಾ ಕಾರಿಡಾರ್ ಸ್ಥಾಪನೆಗೆ ರೈತರು ವಿರೋಧ ವ್ಯಕ್ತಪಡಿಸಿದ್ದು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಇಂದು ಭೇಟಿ ಮಾಡಿ ಕೈಗಾರಿಕಾ ಕಾರಿಡಾರ್ ಕೈ ಬಿಡುವಂತೆ ಆಗ್ರಹಿಸಿದ್ದಾರೆ.

ರೈತರ ಮನವಿಗೆ ಸ್ಪಂದಿಸಿದ ಎಸ್ಸೆಸ್, ರೈತರು ವಿರೋಧಿಸಿದರೂ ಸಹ ಆಡಳಿತಾರೂಢ ಬಿಜೆಪಿಯವರು ಭೂಸ್ವಾಧೀನಕ್ಕೆ ಮುಂದಾಗಿರುವುದನ್ನು ಖಂಡಿಸಿ, ನಾವೂ ವೈಯಕ್ತಿಕವಾಗಿ ಮತ್ತು ನಮ್ಮ ಪಕ್ಷದಿಂದ ಸಾಗುವಳಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸುತ್ತೇವೆ ಎಂದರು.

**ಮುಖ್ಯಮಂತ್ರಿಗಳೊಂದಿಗೆ ಚರ್ಚೆ: ರೈತರಿಗೆ ಎಸ್ಸೆಸ್ ಭರವಸೆ**

ಈ ಕುರಿತಂತೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಅನಿವಾರ್ಯವಾದರೆ ಮುಖ್ಯಮಂತ್ರಿಗಳ ಜೊತೆಯೂ ಸಹ ಮಾತನಾಡಿ ಮೆಳ್ಳೇಕಟ್ಟೆ, ಅಣಜಿ ಮತ್ತು ಲಿಂಗಾಪುರ ಗ್ರಾಮಗಳಲ್ಲಿ ಕೈಗಾರಿಕಾ ಕಾರಿಡಾರ್ ಸ್ಥಾಪನೆ ಕೈಬಿಡುವಂತೆ ಒತ್ತಾಯಿಸುತ್ತೇನೆ ಎಂದು ತಿಳಿಸಿ ಭಾನುವಾರದಂದು ದಾವಣಗೆರೆಗೆ ಮುಖ್ಯಮಂತ್ರಿಗಳು ಆಗಮಿಸಲಿದ್ದು, ಈ ವೇಳೆ ತಮ್ಮನ್ನು ಮುಖ್ಯಮಂತ್ರಿಗಳ ಜೊತೆ ಭೇಟಿ ಮಾಡಿಸಿ ಮಾತುಕತೆ ನಡೆಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಎಸ್.ಬಸವಂತಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ಡಿ.ಟಿ.ಹನುಮಂತಪ್ಪ, ಸಿ.ಟಿ.ಕುಮಾರ್, ಎಂ.ಎಸ್. ನಾಗರಾಜ್, ಬಿ.ಎಸ್.ಪ್ರದೀಪ್, ಎಂ.ಎಸ್. ಮಲ್ಲಿಕಾರ್ಜುನ್, ವೀರಬಸಪ್ಪ, ಬಿ.ಎಂ.ವೆಂಕಟೇಶ್ ಸೇರಿದಂತೆ ಮೆಳ್ಳೇಕಟ್ಟೆ, ಅಣಜಿ ಮತ್ತು ಲಿಂಗಾಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಲಸಿರಿ : ಸಗಟು ಗುತ್ತಿಗೆದಾರನ ವಿರುದ್ಧ ಕ್ರಮದ ಎಚ್ಚರಿಕೆ



**ಡಿಸೆಂಬರ್ ಒಳಗೆ ನಿರಂತರ ನೀರು ಕಾಮಗಾರಿ ಪೂರ್ಣಗೊಳಿಸಲು ಸಿದ್ದೇಶ್ವರ್ ಸೂಚನೆ**

ದಾವಣಗೆರೆ, ಆ. 18 - ಜಲಸಿರಿ ಯೋಜನೆಯ ಸಗಟು ನೀರು ಸರಬರಾಜು ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸದ ಗುತ್ತಿಗೆದಾರರ ವಿರುದ್ಧ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧವೇ ಕ್ರಮ ತೆಗೆದುಕೊಳ್ಳುವುದಾಗಿ ಸಂಸದ ಜಿ.ಎಂ. ಸಿದ್ದೇಶ್ವರ ಎಚ್ಚರಿಸಿದ್ದಾರೆ.

ಜಲಸಿರಿ ಯೋಜನೆಯ ಪ್ರಗತಿ ಕುರಿತು ತಮ್ಮ ಅಧ್ಯಕ್ಷತೆಯಲ್ಲಿ ಸ್ಮಾರ್ಟ್ ಸಿಟಿ ಕಚೇರಿಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಅವರು ಈ ಎಚ್ಚರಿಕೆ ನೀಡಿದ್ದಾರೆ.

ಎರಡು ತಿಂಗಳ ಹಿಂದೆ ಸಭೆ ನಡೆಸಿ ಕಾಮಗಾರಿ ಚುರುಕುಗೊಳಿಸಲು ಹಲವಾರು ಸೂಚನೆ ನೀಡಿ ಕಾಲಮಿತಿ ನಿಗದಿಪಡಿಸಲಾಗಿತ್ತು. ಆದರೆ, ಕೆಲ ಕಾಮಗಾರಿಗಳಲ್ಲಿ ಶೇ.90ರಷ್ಟು ಪ್ರಗತಿಯಾಗಿಲ್ಲ. ಕೆಲಸ ಮಾಡಲು ಸಾಧ್ಯವಾಗದೇ ಇದ್ದರೆ ಗುತ್ತಿಗೆದಾರನಿಗೆ ದಂಡ ವಿಧಿಸಿ, ಇಲ್ಲವೇ ಗುತ್ತಿಗೆಯನ್ನೇ (3ನೇ ಪುಟಕ್ಕೆ)

# 30 ಜಾನಪದ ಕಲಾವಿದರಿಗೆ ಪ್ರಶಸ್ತಿ

**ದಾವಣಗೆರೆಯ ಭಜನೆ ಗಾಯಕ ಡಿ.ಜಿ.ನಾಗರಾಜಪ್ಪ ಪ್ರಶಸ್ತಿಗೆ ಆಯ್ಕೆ**

ಬೆಂಗಳೂರು, ಆ. 18- ಕರ್ನಾಟಕ ಜಾನಪದ ಅಕಾಡೆಮಿಯು 2022ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಪ್ರತಿ ಜಿಲ್ಲೆಗೆ ಒಬ್ಬರಂತೆ 30 ಹಿರಿಯ ಕಲಾವಿದರು ಹಾಗೂ ಇಬ್ಬರು ಜಾನಪದ ತಜ್ಞರಿಗೆ ವಾರ್ಷಿಕ ಗೌರವ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಅಕಾಡೆಮಿಯ ಅಧ್ಯಕ್ಷರಾದ ಬಿ. ಮಂಜಮ್ಮ ಜೋಗತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಲಾವಿದರಿಗೆ ನೀಡುವ (2ನೇ ಪುಟಕ್ಕೆ)

# ಬಡ್ಡಿ ದರ ಹೆಚ್ಚಿನ ಮಟ್ಟದಲ್ಲೇ ಮುಂದುವರೆಸಲು ಇಂಗಿತ

ಮುಂಬೈ, ಆ. 18 – ಹಣದುಬ್ಬರ ನಿರಂತರವಾಗಿ ಹೆಚ್ಚಿನ ಮಟ್ಟದಲ್ಲಿದ್ದಾಗ ಸೂಕ್ತ ನೀತಿಗಳನ್ನು ಅನುಸರಿಬೇಕಾಗುತ್ತದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಆ ಮೂಲಕ ಬಡ್ಡಿ ದರ ಹೆಚ್ಚಿನ ಮಟ್ಟದಲ್ಲೇ ಮುಂದುವರೆಸುವ ಇಂಗಿತ ವ್ಯಕ್ತಪಡಿಸಿದೆ. ಜುಲೈ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ.6.71ರಷ್ಟಿತ್ತು. ಇದು ಆರ್. (2ನೇ ಪುಟಕ್ಕೆ)

# ಹರಿಹರ: ಉಪನೋಂದಣಿ, ಆಸ್ಪತ್ರೆಗಳಿಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ



**ಸೇವೆಗಳನ್ನು ಉತ್ತಮಗೊಳಿಸಿ, ಲೋಪ ಸರಿಪಡಿಸಲು ಸೂಚನೆ**

ಹರಿಹರ, ಆ.18- ನಗರದ ಉಪನೋಂದಣಿ ಕಚೇರಿ ಮತ್ತು ಸಾರ್ವಜನಿಕ ಆಸ್ಪತ್ರೆಗೆ ಲೋಕಾಯುಕ್ತ ಅಧಿಕಾರಿಗಳಾದ ಎಂ.ಎಸ್. ಕೌಲಾಪುರ ಹಾಗೂ ಆಂಜನೇಯ ಮತ್ತು ಸಿಬ್ಬಂದಿ ಭೇಟಿ ಕೊಟ್ಟು ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

ನಗರದ ಸಾರ್ವಜನಿಕ ಆಸ್ಪತ್ರೆಗೆ ಬೆಳಗ್ಗೆ 11 ಗಂಟೆಗೆ ದಿಢೀರ್ ಭೇಟಿ ಕೊಟ್ಟ ಲೋಕಾಯುಕ್ತ ಅಧಿಕಾರಿಗಳು ಔಷಧಿ ವಿತರಣೆ, ಪ್ರಯೋಗಾಲಯ, ವಾರ್ಡ್‌ಗಳ ಬೆಡ್, ರೋಗಿಗಳ ತಪಾಸಣೆ, ಶಸ್ತ್ರಚಿಕಿತ್ಸೆ, ದಾಸ್ತಾನು ಮತ್ತಿತರೆ ವಿಷಯಗಳನ್ನು ಪರಿಶೀಲಿಸಿದ್ದಾರೆ.

ಸಾರ್ವಜನಿಕರಿಗೆ ತೊಂದರೆ ಆಗದಂತೆ ಸರಿಯಾದ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸೂಚನೆ ನೀಡಲಾಗಿದೆ.

ಇಬ್ಬರು ಸಿಬ್ಬಂದಿಗಳ ವೇತನವನ್ನು ಹಲವು ತಿಂಗಳಿಂದ ನೀಡದಿರುವುದನ್ನು ಗಮನಿಸಿದ ಅಧಿಕಾರಿಗಳು, ಬೇಗ ವೇತನ ನೀಡಲು ತಿಳಿಸಿದ್ದಾರೆ.

ಇದಲ್ಲದೇ ಕೆಲವೊಂದು ಸಣ್ಣಪುಟ್ಟ ವ್ಯತ್ಯಾಸಗಳು ಕಂಡು ಬಂದಿದ್ದು, ಅವುಗಳನ್ನು (4ನೇ ಪುಟಕ್ಕೆ)


॥ ಶ್ರೀ ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ನಗರ, ಎಂ.ಸಿ.ಸಿ. "ಬಿ" ಬ್ಲಾಕ್ ನಿವಾಸಿಗಳಾದ ಡಾ॥ ಪಿ. ಮಲ್ಲೇಶ್ ಮತ್ತು ಡಾ॥ ಪಿ. ಶಿವಾನಂದ್ ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 16.08.2022ನೇ ಮಂಗಳವಾರ ಬೆಳಗ್ಗೆ 11.00 ಕ್ಕೆ ನಮ್ಮ ಪೂಜ್ಯ ತಂದೆಯವರಾದ

ಶ್ರೀ ಡಿ. ಪುಷ್ಪಣ್ಣ
(ನಿವೃತ್ತ ಕಾರ್ಯಪಾಲಕ ಅಭಿಯಂತರರು)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ "ಕೈಲಾಸ ಸಮಾರಾಧನೆ"ಯನ್ನು ದಿನಾಂಕ : 20.08.2022ನೇ ಶನಿವಾರ ಬೆಳಿಗ್ಗೆ 11.00ಕ್ಕೆ ಶ್ರೀ ತರಳಬಾಳು ಮಿನಿ ಸಭಾಭವನ, ಅನುಭವ ಮಂಟಪ ಆವರಣ, ಹದಡಿ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶಾರದಾ ಮತ್ತು ಡಾ॥ ಮಲ್ಲಿಕಾರ್ಜುನ್ ಜಿ.ಬಿ, ಶ್ರೀಮತಿ ತ್ರಿವೇಣಿ ಮತ್ತು ಡಾ॥ ಪಿ. ಮಲ್ಲೇಶ್, ಶ್ರೀಮತಿ ಗೌರಿ ಮತ್ತು ಡಾ॥ ಪಿ. ಶಿವಾನಂದ. ಹಾಗೂ ಬಂಧು-ಮಿತ್ರರು ಫೋ. : 99009 78270

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಶಿವನಾರದಮುನಿ ಸ್ವಾಮಿ ಕಡೇ ಶ್ರಾವಣ ಶನಿವಾರದ ವಿಶೇಷ ಪೂಜೆ**



ಇತಿಹಾಸ ಪ್ರಸಿದ್ಧ ಶ್ರೀ ಕ್ಷೇತ್ರ ಚಿಗಟೇರಿ ಗ್ರಾಮದಲ್ಲಿ ದಿನಾಂಕ: 20-08-2022 ರಂದು ಸ್ವಾಮಿಯ ಕಡೇ ಶ್ರಾವಣ ಶನಿವಾರ ಬೆಳಗ್ಗೆ 5.00 ರಿಂದ 6.00 ಗಂಟೆಯೊಳಗೆ ರುದ್ರಾಭಿಷೇಕ ನೆರವೇರಲಿದ್ದು, ನಂತರ ಹೊಸ ಮಡಿ, ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆಯು ಬೆಳಿಗ್ಗೆ 9.30 ರಿಂದ 10.00 ಗಂಟೆಯೊಳಗಾಗಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪ್ರಧಾನ ಅರ್ಚಕರಿಂದ ಮಹಾ ಮಂಗಳಾರತಿಯೊಂದಿಗೆ ವಿಶೇಷ ಪೂಜೆ ನೆರವೇರುವುದು. ಸರ್ವಭಕ್ತಾದಿಗಳು ಸಮಯಕ್ಕೆ ಸರಿಯಾಗಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಿ, ದರ್ಶನಾಶೀರ್ವಾದ ಪಡೆಯಬೇಕೆಂದು, ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಅಣಬೇರು ರಾಜಣ್ಣನವರು ತಿಳಿಸಿರುತ್ತಾರೆ.

ವಿ.ಸೂ. :- ದಿನಾಂಕ 27.8.2022ರ ಶ್ರಾವಣ ಶನಿವಾರ ಅಮಾವಾಸೆ ಬಂದಿರುವುದರಿಂದ ಕಡೇ ಶ್ರಾವಣ ಶನಿವಾರವನ್ನು ದಿನಾಂಕ 20.8.2022ರಂದು ನೆರವೇರಿಸಲಾಗುವುದು. ಸರ್ವ ಭಕ್ತಾದಿಗಳಿಗೆ ಸ್ವಾಮಿಯ ವಿಶೇಷ ಪೂಜೆಯ ನಂತರ ಪ್ರಸಾದ ವ್ಯವಸ್ಥೆಯನ್ನು ಶ್ರೀ ನಾರದಮುನಿ ಪ್ರೌಢಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ.

**ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.) ಚಿಗಟೇರಿ.**
ಟ್ರಸ್ಟಿನ ಸರ್ವ ಸದಸ್ಯರು ಮತ್ತು ದಾಸೋಹ ಸಮಿತಿ ಸದಸ್ಯರುಗಳು ಸರ್ವಭಕ್ತಾದಿಗಳು ಹಾಗೂ ಚಿಗಟೇರಿ ಗ್ರಾಮಸ್ಥರು.


# ಆಗಸ್ಟ್ ಅಂತ್ಯದಲ್ಲಿ ಮತ್ತೆ ಮಳೆ ಅಬ್ಬರ

ಬೆಂಗಳೂರು, ಆ. 18 - ಆಗಸ್ಟ್ ಕೊನೆಯ ವಾರ ರಾಜ್ಯ ಮತ್ತೊಮ್ಮೆ ಮಳೆಯ ಅಬ್ಬರ ಎದುರಿಸಬೇಕಾಗಿದೆ.

ಸತತವಾಗಿ ಸುರಿದ ಮಳೆ ಕೆಲ ದಿನಗಳಿಂದ ಬಿಡುವು ಕೊಟ್ಟಿತ್ತು, ಹವಾಮಾನ ಇಲಾಖೆ ಪ್ರಕಾರ ಇದೇ 26 ರಿಂದ ನಾಲ್ಕು ದಿನಗಳ ಕಾಲ ಇಡೀ ರಾಜ್ಯಾದ್ಯಂತ ಭಾರೀ ಮಳೆ ಬೀಳಲಿದೆ.

ಕೊಡಗು ಜಿಲ್ಲೆಯಲ್ಲಿ 200 ಮಿಲಿಮೀಟರ್‌ನಷ್ಟು ಅತೀ ಹೆಚ್ಚು ಮಳೆ ಸುರಿಯಲಿದ್ದು, ಮತ್ತೊಮ್ಮೆ ಜಿಲ್ಲೆಯಲ್ಲಿ ಪ್ರವಾಹ ಮತ್ತು ಭೂಕುಸಿತ ದೊಡ್ಡ ಪ್ರಮಾಣದಲ್ಲಿ ಎದುರಾಗಬಹುದೆಂದು ಸರ್ಕಾರಕ್ಕೆ ಸೂಚನೆ ನೀಡಿದೆ.

ಉಳಿದೆಡೆ 100 ರಿಂದ 150 ಮಿಲಿ (3ನೇ ಪುಟಕ್ಕೆ)


**ಶ್ರೀಮತಿ ಹೆಚ್. ಹನುಮಕ್ಕ ಕಂದಗಲ್ ನಿಧನ**



ಹೆಚ್. ವೆಂಕಟೇಶ್
ಜಿಲ್ಲಾ ಪಂಚಾಯ್ತಿ ಇಂಜಿನಿಯರ್
ಇವರ ತಾಯಿಯವರಾದ

ಶ್ರೀಮತಿ ಹನುಮಕ್ಕ ಕಂದಗಲ್

ಇವರು ದಿನಾಂಕ : 18.8.2022 ರಂದು ಬೆಳಿಗ್ಗೆ 8.29ಕ್ಕೆ ನಿಧನರಾಗಿರುತ್ತಾರೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಇವರು 5 ಜನ ಹೆಣ್ಣು ಮಕ್ಕಳು, ಓರ್ವ ಮಗ, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 19.08.2022ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ದಾವಣಗೆರೆ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬದವರು :
ಫೋನ್ : 94481 55188, 74118 14602

# ನೇರ ಶಿಕ್ಷಣ ಆರಂಭಿಸಿದ ಉಕ್ರೇನ್

## ಭಾರತದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಂಕಷ್ಟ

ನವದೆಹಲಿ, ಆ. 18 - ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ನಂತರ ನೇರ ಶಿಕ್ಷಣ ನಿಲ್ಲಿಸಿದ್ದ ಅಲ್ಲಿನ ಕೆಲ ವಿಶ್ವವಿದ್ಯಾನಿಲಯಗಳು, ಬರುವ ಸೆಪ್ಟೆಂಬರ್‌ನಲ್ಲಿ ಮತ್ತೆ ನೇರ ಶಿಕ್ಷಣ ಆರಂಭಿಸುವುದಾಗಿ ತಿಳಿಸಿವೆ.

ರಷ್ಯಾ ದಾಳಿಯ ನಂತರ ಅಲ್ಲಿಂದ ಭಾರತಕ್ಕೆ ವಾಪಸ್ಸಾಗಿದ್ದ 20 ಸಾವಿರಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತೊಂದು ಸಮಸ್ಯೆ ಎದುರಾಗಿದೆ.

ಉಕ್ರೇನ್ ರಾಜಧಾನಿ ಕೀವ್‌ನಲ್ಲಿರುವ ಕೆಲ ವಿಶ್ವವಿದ್ಯಾನಿಲಯಗಳು ಸೆಪ್ಟೆಂಬರ್‌ನಲ್ಲಿ ಆಫ್‌ಲೈನ್ ತರಗತಿ ಆರಂಭಿಸಲಾಗುವುದು ಹಾಗೂ ಅಕ್ಟೋಬರ್‌ನಲ್ಲಿ ಕಡ್ಡಾಯ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿವೆ.

ಉಕ್ರೇನ್ ನಿಯಮಗಳ ಪ್ರಕಾರ, ವೈದ್ಯಕೀಯ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಗಳು ಕೆ.ಆರ್.ಒ.ಕೆ - 1 ಪರೀಕ್ಷೆಗೆ ಹಾಜರಾಗಬೇಕಿದೆ. ಅಂತಿಮ ವರ್ಷ ಮುಗಿದ ನಂತರ ಎರಡನೇ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

ಕಳೆದ ಆರು ತಿಂಗಳಿನಿಂದ ಉಕ್ರೇನ್ ವಿಶ್ವವಿದ್ಯಾನಿಲಯಗಳು ಆನ್‌ಲೈನ್ ಮೂಲಕ ತರಗತಿ ನಡೆಸುತ್ತಿದ್ದವು. ಈಗ ಆಫ್‌ಲೈನ್ ತರಗತಿಗೆ ಮುಂದಾಗಿರುವುದು ವಿದ್ಯಾರ್ಥಿಗಳಲ್ಲಿ ಕಳವಳ ತಂದಿದೆ.

ನೇರ ತರಗತಿ ಆರಂಭಿಸುವುದಾಗಿ ಕೀವ್‌ನಲ್ಲಿರುವ ಟಿ. ಎಸ್.ಎನ್.ಎಂ. ವಿಶ್ವವಿದ್ಯಾನಿಲಯ ತಮಗೆ ಮೆಸೇಜ್ ಕಳಿಸಿದೆ. ಸೆಪ್ಟೆಂಬರ್ 1ರಿಂದ ತರಗತಿ ಆರಂಭವಾಗುವುದು ಎಂದು ತಿಳಿಸಲಾಗಿದೆ. ಸುರಕ್ಷತೆಯ ಗ್ಯಾರಂಟಿ ನೀಡುವುದಾಗಿ ವಿಶ್ವವಿದ್ಯಾನಿಲಯ ತಿಳಿಸಿದೆ ಎಂದು ನೋಯ್ಡಾದ 20 ವರ್ಷದ ವಿದ್ಯಾರ್ಥಿನಿ ಆಶ್ನ ಪಂಡಿತ್ ಹೇಳಿದ್ದಾರೆ. ಆಶ್ನ ಅವರು 4ನೇ ವರ್ಷದ ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದಾರೆ.

ಯುದ್ಧ ನಡೆಯುತ್ತಿರುವ ಮಧ್ಯೆಯೇ ಉಕ್ರೇನ್‌ಗೆ ತೆರಳುವುದು ಹೆದರಿಕೆ ತಂದಿದೆ. ನಾನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಜೊತೆ ಮಾತನಾಡಿದ್ದೆ, ಇಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ ಎಂದವರು ಹೇಳಿದ್ದಾರೆ. ಆದರೆ, ಎಲ್ಲಿಯವರೆಗೆ ಪರಿಸ್ಥಿತಿ ಸಾಮಾನ್ಯವಾಗಿರಲಿದೆ ಎಂಬುದು ಸ್ಪಷ್ಟವಾಗಿಲ್ಲ. ಕ್ಯಾಂಪಸ್‌ಗೆ ಬರಲು ಸಾಧ್ಯವಾಗದೇ ಇದ್ದವರಿಗೆ ಆನ್‌ಲೈನ್ ತರಗತಿ ನಡೆಸಲಾಗುವುದೇ ಎಂಬುದನ್ನು ವಿಶ್ವವಿದ್ಯಾನಿಲಯ ಸ್ಪಷ್ಟಪಡಿಸಿಲ್ಲ ಎಂದವರು ಹೇಳಿದ್ದಾರೆ.

ನಮ್ಮಲ್ಲಿ ಕೆಲವರಿಗೆ ಆನ್‌ಲೈನ್ ತರಗತಿ ನಡೆಸಲು ವಿಶ್ವವಿದ್ಯಾನಿಲಯ ಸಮ್ಮತಿಸಿದರೂ ಸಹ ಭಾರತೀಯ ವೈದ್ಯಕೀಯ ಮಂಡಳಿ ಇದಕ್ಕೆ ಅನುಮತಿ ನೀಡುವುದಿಲ್ಲ. ಇದೆಲ್ಲವೂ ನಮ್ಮ ನಿದ್ದೆಗೆಡಿಸಿದೆ. ಈ ಹಿಂದೆ ಪೋಲ್ಯಾಂಡ್ ಇಲ್ಲವೇ ಜಾರ್ಜಿಯಾದಲ್ಲಿ ನೇರ ಪಾಠಕ್ಕೆ ವ್ಯವಸ್ಥೆ ಮಾಡುವುದಾಗಿ ವಿಶ್ವವಿದ್ಯಾನಿಲಯ ತಿಳಿಸಿತ್ತು. ಅದು ಫಲಕಾರಿಯಾಗಲಿಲ್ಲ ಎಂದು ಆಶ್ನ ತಿಳಿಸಿದ್ದಾರೆ.

ಹೆಸರು ಬಹಿರಂಗ ಪಡಿಸಲು ಬಯಸದ ಗುರ್ಗಾಂವ್‌ನ ಇನ್ನೋರ್ವ ವಿದ್ಯಾರ್ಥಿ ಹೇಳಿಕೆ ನೀಡಿದ್ದು, ನಾನು ಅಂತಿಮ ವರ್ಷದಲ್ಲಿದ್ದೆ. ಮುಂದೆ ಏನು ಮಾಡಬೇಕು ಎಂಬುದು ತಿಳಿಯುತ್ತಿಲ್ಲ. ಉಕ್ರೇನ್‌ನಲ್ಲಿ ಸುರಕ್ಷತೆಯ ಬಗ್ಗೆ ಅನುಮಾನವಿದೆ ಎಂದಿದ್ದಾರೆ.

ವಿದೇಶದಲ್ಲಿ ವೈದ್ಯಕೀಯ ಶಿಕ್ಷಣ ಅರ್ಧಕ್ಕೆ ನಿಂತಿರುವವರಿಗೆ ಭಾರತದಲ್ಲಿ ಶಿಕ್ಷಣ ಮುಂದುವರೆಸಲು ಕಾಯ್ದೆಗಳಲ್ಲಿ ಅವಕಾಶವಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜಸ್ಥಾನದ ಚುರು ಎಂಬಲ್ಲಿನ ಗವೇಶ್ ಶರ್ಮ ಮಾತನಾಡಿ, ವಿಶ್ವವಿದ್ಯಾನಿಲಯ ಬರಲು ತಿಳಿಸುತ್ತಿದೆ. ಆದರೆ, ಕುಟುಂಬದವರು ಕಳಿಸಲು ಇಷ್ಟಪಡುತ್ತಿಲ್ಲ. ಪರಿಸ್ಥಿತಿ ಏನಾಗುತ್ತದೋ ನೋಡಬೇಕಿದೆ. ಮುಂದಿನ ವರ್ಷ ನಾನು ಕೆ.ಆರ್.ಒ.ಕೆ. ಪರೀಕ್ಷೆ ಬರೆಯುತ್ತೇನೆ. ಒಂದು ವರ್ಷ ಹೋದರೂ ಪರವಾಗಿಲ್ಲ, ಜೀವನದ ಸುರಕ್ಷತೆ ಮುಖ್ಯ ಎಂದಿದ್ದಾರೆ. ಒಂದು ಕಾಲದ ಕ್ರಮವಾಗಿ ವಿದೇಶದಲ್ಲಿ ಅಧ್ಯಯನ ಪೂರ್ಣಗೊಳಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಭಾರತದಲ್ಲೇ ವ್ಯವಸ್ಥೆ ಕಲ್ಪಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಭಾರತೀಯ ವೈದ್ಯಕೀಯ ಮಂಡಳಿ ಒತ್ತಾಯಿಸಿತ್ತು. ಸರ್ಕಾರ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

# ಯುಕ್ತ ವಯಸ್ಸಿಗೆ ವಿವಾಹವಾಗಿ ಬದುಕು ಕಟ್ಟಿಕೊಳ್ಳಿ



## ಹಿರಿಯ ವೈದ್ಯ ಡಾ. ಜಯಪ್ರಕಾಶ್ ಮಾಳದ್‌ಕರ್

ದಾವಣಗೆರೆ, ಆ. 18- ಯುವಕ, ಯುವತಿಯರು ತಮ್ಮ ವಿದ್ಯಾಭ್ಯಾಸ ಮುಗಿಸಿ ಸೂಕ್ತ ವೃತ್ತಿಯಲ್ಲಿ ತೊಡಗಿಸಿಕೊಂಡ ಮೇಲೆ ಯುಕ್ತ ವಯಸ್ಸಿಗೆ ವಿವಾಹವಾಗಿ ಬದುಕು ಕಟ್ಟಿಕೊಳ್ಳಿ. ವಿವಾಹ ಸಂದರ್ಭದಲ್ಲಿ ಗಳಿಕೆ ನೋಡುತ್ತಾ ಕಾಲಹರಣ ಮಾಡಿದರೆ, ವಯಸ್ಸು ನಿಮ್ಮನ್ನು ಸಹಕರಿಸುವುದಿಲ್ಲ. ಹೀಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಡೈವರ್ಸ್‌ಗಳು ಸಂಭವಿಸುತ್ತಿವೆ. ಈ ಹಿಂದೆ ಗುಣ ನೋಡಿ ಹೆಣ್ಣು ಕೊಡುವ ಕಾಲವಿತ್ತು. ಈಗ ಗಳಿಕೆ ನೋಡಿ ವಿವಾಹ ಮಾಡುವ ದಿನಗಳು ಬಂದಿವೆ. ಈ ಮನಸ್ಥಿತಿ ಬದಲಾಗಬೇಕು ಎಂದು ನಗರದ ಕೀಲು, ಮೂಳೆ ತಜ್ಞ ಡಾ. ಜಯಪ್ರಕಾಶ್ ಮಾಳದ್‌ಕರ್ ನುಡಿದರು.

ನಗರದ ಶ್ರೀ ವಿಠ್ಠಲ ರುಕ್ಮಾಯಿ ಸಮುದಾಯ ಭವನದಲ್ಲಿ ನಡೆದ ಭಾವಸಾರ ಕ್ಷತ್ರಿಯ ಸಮಾಜದ ವಧು-ವರರ 7ನೇ ರಾಜ್ಯ ಮಟ್ಟದ ಸಮಾವೇಶದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾವಸಾರ ಕ್ಷತ್ರಿಯ ದೈವ ಮಂಡಳಿ ಅಧ್ಯಕ್ಷ ರಘು ಮುಸಳೆ ಮಾತನಾಡಿ, ನಮ್ಮ ಸಮಾಜವು ಸಣ್ಣ ಸಮಾಜವಾಗಿದ್ದು, ವರರ ಸಂಖ್ಯೆ ಹೆಚ್ಚಾಗಿದೆ. ವಧುಗಳನ್ನು ಹುಡುಕುವುದು ದುಸ್ತರವಾಗಿದೆ. ಈ ನಿಟ್ಟಿನಲ್ಲಿ ಇಂದಿನ ಈ ಸಮ್ಮೇಳನ ಸಮಾಜ ಬಾಂಧವರಿಗೆ ಅನುಕೂಲಕರವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದೈವ ಮಂಡಳಿ ಮಾಜಿ ಅಧ್ಯಕ್ಷ ರಾಘವೇಂದ್ರ ರಾವ್ ಗುಜ್ಜರ್, ಈಗ್ಗೆ 20 ವರ್ಷದ ಹಿಂದೆ ಪ್ರಾರಂಭಿಸಿದ ಈ ವೇದಿಕೆ ಈಗ ದೈವ ಮಂಡಳಿ ಹಾಗೂ ಭಾವಸಾರ ವಿಷನ್ ಇಂಡಿಯಾದಿಂದ ಸೂಕ್ತ ವರ-ವಧುವಿನ ಹುಡುಕಾಟದ ತಡಕಾಟ ಕಡಿಮೆಗೊಳಿಸಿ ಮುಕ್ತ ಮನಸ್ಸಿನ ಸಂಬಂಧಗಳಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೈಸೂರಿನ ಆರ್. ರಮೇಶ್ ನಾಜರೆ ಮಾತನಾಡಿ, ತಮ್ಮ ತಮ್ಮ ಮಕ್ಕಳಿಗೆ ಸೂಕ್ತ ವಧು-ವರರನ್ನು ಆರಿಸಿಕೊಳ್ಳುವುದರ ಜೊತೆಗೆ ತಮ್ಮ ತಂದೆ-ತಾಯಿ, ಅತ್ತೆ-ಮಾವಂದಿರನ್ನು ಪ್ರೀತಿಸುವ ವೃದ್ಧಾಪ್ಯದಲ್ಲಿ ಪಾಲನೆ, ಪೋಷಣೆ ಮಾಡುವ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಬೆಂಗಳೂರಿನ ವಧು-ವರರ ಮಾಹಿತಿ ಸಂಗ್ರಾಹಕರಾದ ಲಲಿತ ನಾಜರೆ, ವಾಗೀಶ್ ಬಾಬು ಪಿ. ಗುಜ್ಜರ್ ಮಾತನಾಡಿದರು. ಜಯಶ್ರೀ ಗುಜ್ಜರ್, ಅನ್ನಪೂರ್ಣ ಗುಜ್ಜರ್, ನಾಗವೇಣಿ ಟಿಕಾರೆ, ಆರತಿ ಗುಜ್ಜರ್ ವಧು-ವರರನ್ನು ಪರಿಚಯಿಸಿದರು. ಕಲಾವತಿ ಮಹಿಳಾ ಮಂಡಳಿಯವರು ಸ್ವಾಗತಿಸಿದರು. ವಿಜಯಕುಮಾರ್ ಟಿಕಾರೆ ಸ್ವಾಗತಿಸಿದರು. ಹರೀಶ್ ಖಾಂಡ್ಕೆ ವಂದಿಸಿದರು. ನಿಂಗೋಜಿ ರಾಘು ಗುಜ್ಜರ್ ನಿರೂಪಿಸಿದಿರು.

ವಧು-ವರ ಕೇಂದ್ರದ ಅಧ್ಯಕ್ಷ ಸತ್ಯನಾರಾಯಣ ಸಾಕ್ರೆ, ಕಾರ್ಯದರ್ಶಿ ಬಾಲಕೃಷ್ಣ ನವಲೆ, ಉಪಾ ಧ್ಯಕ್ಷರಾದ ಅಶೋಕ ವಿ. ಅಂಬರ್‌ಕರ್, ನರೇಂದ್ರ ಟಿಕಾರೆ, ಶೈಲೇಶ್ ನಾಜರೆ, ಶಾಮಸುಂದರ್ ಡೋಯಿಜೋಡೆ, ನಿಂಗಸ್ವಾಮಿ ರಾವ್, ಸುರೇಖ ಬೇಂದ್ರೆ, ದಯಾನಂದ್ ಮಾಳದ್‌ಕರ್, ಪ್ರತಾಪ್ ಗುಜ್ಜರ್, ಮಂಜುನಾಥ್ ನವಲೆ, ವಸಂತ್ ಪೊಕಳೆ, ಮಂಜುನಾಥ್ ಗಡ್ಡಾಳೆ, ತುಳಜಾರಾಂ ಮಾಳದ್‌ಕರ್, ಶಂಕರ್‌ರಾವ್ ನವಲೆ, ಷಣ್ಮುಖರಾವ್ ಗುಜ್ಜರ್ ಹಾಗೂ ಇತರರು ಉಪಸ್ಥಿತರಿದ್ದರು.

## ಎಕೆ - 47 ಹೊಂದಿದ್ದ ದೋಣಿ ರಾಯಗಢದಲ್ಲಿ ಪತ್ತೆ

ಮುಂಬೈ, ಆ. 18 – ಮೂರು ಎಕೆ - 47 ರೈಫಲ್‌ಗಳನ್ನು ಹೊಂದಿದ್ದ 16 ಮೀಟರ್ ಉದ್ದದ ದೋಣಿಯೊಂದು ಮಹಾರಾಷ್ಟ್ರದ ರಾಯಗಢ ತೀರದಲ್ಲಿ ಪತ್ತೆಯಾಗಿದೆ. ಇದು ಆಸ್ಟ್ರೇಲಿಯಾದ ಮಹಿಳೆಯೊಬ್ಬರ ಮಾಲೀಕತ್ವಕ್ಕೆ ಸೇರಿದ್ದಾಗಿದೆ. ಈ ದೋಣಿ ಭಯೋತ್ಪಾದನೆಯ ಹಿನ್ನೆಲೆ ಹೊಂದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ದಹಿ ಹಂಡಿ ಹಾಗೂ ಗಣೇಶೋತ್ಸವಗಳ ಸಂದರ್ಭದಲ್ಲೇ ಶಸ್ತ್ರಗಳಿರುವ ದೋಣಿ ಪತ್ತೆಯಾಗಿರುವುದು ಜನರಲ್ಲಿ ಕಳವಳ ತಂದಿದೆ. ಆದರೆ, ಘಟನೆಯು ಉಗ್ರವಾದದ ಜೊತೆ ಸಂಬಂಧ ಹೊಂದಿರುವ ಸಾಕ್ಷಿಗಳು ದೊರೆತಿಲ್ಲ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಈ ದೋಣಿಯು ಆಸ್ಟ್ರೇಲಿಯಾದ ಮಹಿಳೆ ಹನಾ ಲೊರ್ಡೊರ್ಗಾನ್ ಎಂಬುವವರಿಗೆ ಸೇರಿದ್ದು, ಆಕೆಯ ಗಂಡ ಕ್ಯಾಪ್ಟನ್ . ದೋಣಿ ಹಾನಿಗೀಡಾಗಿದೆ ಎಂದು ಫಡ್ನವೀಸ್ ಹೇಳಿದ್ದಾರೆ.

ದೋಣಿಯಲ್ಲಿ ಮೂರು ಎಕೆ - 47 ರೈಫಲ್ ಹಾಗೂ ಕೆಲ ಗುಂಡುಗಳು ಮತ್ತು ದಾಖಲೆಗಳು ಪತ್ತೆಯಾಗಿವೆ.

# ವಿಮಾನದಲ್ಲಿ ಸೂಜಿ ಅಪಾಯಕಾರಿ, ಕತ್ತಿ ಅಲ್ಲವೇ?

## ಸಿಖ್ ಸಮುದಾಯದವರು ವಿಮಾನದಲ್ಲಿ ಕತ್ತಿ ತೆಗೆದುಕೊಂಡು ಹೋಗಲು ಸರ್ಕಾರ ಅನುಮತಿ ನೀಡಿರುವುದಕ್ಕೆ ಹೈಕೋರ್ಟ್‌ನಲ್ಲಿ ಪ್ರಶ್ನೆ

ನವದೆಹಲಿ, ಆ. 18 – ಸಿಖ್ ಸಮುದಾಯದವರು ದೇಶೀಯ ವಿಮಾನದಲ್ಲಿ ಆರು ಇಂಚು ಉದ್ದದ ಕತ್ತಿಯನ್ನು ತೆಗೆದುಕೊಂಡು ಹೋಗಲು ಕೇಂದ್ರ ಸರ್ಕಾರ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯ ಹಿನ್ನೆಲೆಯಲ್ಲಿ ತಡೆಯಾಜ್ಞೆ ಹೊರಡಿಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಕೇಂದ್ರ ಸರ್ಕಾರ ಹಾಗೂ ವಿಮಾನಯಾನ ಪ್ರಧಾನ ನಿರ್ದೇಶನಾಲಯ ಈ ಬಗ್ಗೆ ಉತ್ತರಿಸುವಂತೆ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಅವರನ್ನು ಒಳಗೊಂಡ ಪೀಠ ನೋಟಿಸ್ ಕಳಿಸಿದೆ. ಕಳೆದ ಮಾರ್ಚ್ 4ರಂದು ಆದೇಶ ಹೊರಡಿಸಿದ್ದ ಕೇಂದ್ರ ಸರ್ಕಾರ, ಸಿಖ್ ಸಮುದಾಯದವರು ತಮ್ಮ ಸಂಪ್ರದಾಯದಂತೆ ವಿಮಾನದಲ್ಲಿ ಚಾಕು ತೆಗೆದುಕೊಂಡು ಹೋಗಲು ಅನುಮತಿ ನೀಡಿತ್ತು. ಸಿಖ್ ಸಮುದಾಯದವರು ಈ ಚಾಕುವಿಗೆ ಕಿರ್ಪಾನ್ ಎಂದು ಕರೆಯುತ್ತಾರೆ.

ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಅರ್ಜಿ ದಾಖಲಿಸಿದ್ದ ವಕೀಲ ಹರ್ಷ ವಿಭೊರೆ ಸಿಂಘಾಲ್, ಕೇಂದ್ರ ಸರ್ಕಾರ ಅನುಮತಿ ನೀಡಿರುವ ಕಿರ್ಪಾನ್ ಗಾತ್ರ ವೈಮಾನಿಕ ಸುರಕ್ಷತೆಗೆ ಹಾನಿ ತರುವಂಥದ್ದಾಗಿದೆ ಎಂದಿದ್ದಾರೆ.

ಸೂಜಿ, ಹೆಣಿಗೆಯ ಕಡ್ಡಿ, ತೆಂಗಿನ ಕಾಯಿ, ಸ್ಕ್ರೂ ಡ್ರೈವರ್ ಹಾಗೂ ಸಣ್ಣ ಚಾಕು ಇತ್ಯಾದಿಗಳೂ ಸಹ ವಿಮಾನದಲ್ಲಿ ಅಪಾಯಕಾರಿ ಎಂದು ನಿಷೇಧಿಸಲಾಗಿದೆ. ಹೀಗಿರುವಾಗ ಕಿರ್ಪಾನ್‌ಗೆ ಧರ್ಮದ ಆಧಾರದ ಮೇಲೆ ಅನುಮತಿ ನೀಡಬಹುದೇ? ಎಂದು ಅರ್ಜಿದಾರರು ಪ್ರಶ್ನಿಸಿದ್ದಾರೆ.

ಕಿರ್ಪಾನ್ ಅನ್ನು ಯಾವುದೇ ಹೆಸರಿನಿಂದ ಕರೆದರೂ ಅದು ಅಂತಿಮವಾಗಿ ಚಾಕುವೇ ಆಗಿದೆ. ಚಾಕು ಬಳಸಿ ಹತ್ಯೆ ನಡೆಸಿದ ನೂರಾರು ಪ್ರಕರಣಗಳಿವೆ. ಇದರಿಂದಾಗಿ ವಿಮಾನಗಳಲ್ಲಿ ಚಾಕುವಿಗೆ ಅನುಮತಿ ನೀಡುವುದು ಸುರಕ್ಷತೆಯನ್ನೇ ಅಂತಿಮಗೊಳಿಸಿದಂತೆ ಎಂದು ಅರ್ಜಿದಾರರು ವಾದಿಸಿದ್ದರು.

ವಿಮಾನಗಳ ಹೈಜಾಕ್ ಇತಿಹಾಸವೇ ಇದೆ. ಇದೆಲ್ಲವನ್ನೂ ಕಡೆಗಣಿಸಿ ಕಿರ್ಪಾನ್‌ಗೆ ಅನುಮತಿ ನೀಡಿರುವುದು ಕಾನೂನು ದೃಷ್ಟಿಯಿಂದ ಸರಿಯಲ್ಲ. ಇದು ಅಂತರರಾಷ್ಟ್ರೀಯ ಒಡಂಬಡಿಕೆಗೆ ವಿರುದ್ಧ ಎಂದು ಅರ್ಜಿದಾರರು ಹೇಳಿದ್ದಾರೆ.

ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಕಿರ್ಪಾನ್ ಹಿಡಿಕೆಯ ಉದ್ದ 3 ಇಂಚು ಇರಬಹುದು ಹಾಗೂ ಕತ್ತಿಯ ಅಲಗು 6 ಇಂಚು ಇರಬಹುದು ಎಂದು ತಿಳಿಸಲಾಗಿದೆ. ಆದರೆ, ಚಾಕುವಿನ ದಪ್ಪ ಹಾಗೂ ಅಲಗಿನ ದಪ್ಪದ ಕುರಿತು ಯಾವುದೇ ಸೂಚನೆ ನೀಡಿಲ್ಲ. ಅಲಗು ತೆಳುವಾದಷ್ಟೂ ಅದು ಹರಿತವಾಗುತ್ತದೆ. ಹೀಗಾಗಿ ಇದು ಮತ್ತಷ್ಟು ಅಪಾಯಕಾರಿಯಾಗುತ್ತದೆ ಎಂದು ಅರ್ಜಿದಾರರು ಹೇಳಿದ್ದಾರೆ.

ಮಧ್ಯಂತರ ಆದೇಶ ಹೊರಡಿಸಲು ನಿರಾಕರಿಸಿರುವ ಹೈಕೋರ್ಟ್, ಮುಂದಿನ ವಿಚಾರಣೆಯನ್ನು ಡಿಸೆಂಬರ್‌ಗೆ ನಿಗದಿ ಪಡಿಸಿದೆ.

## ವ್ಯಕ್ತಿಗೆ ಚಾಕು ಇರಿತ : ಓರ್ವನ ಬಂಧನ

ದಾವಣಗೆರೆ, ಆ.18- ವ್ಯಕ್ತಿಯೊಬ್ಬನಿಗೆ ಚಾಕು ಹಾಕಲು ಯತ್ನಿಸಿದ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಓರ್ವನನ್ನು ಬಸವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ಗಾಂಧಿನಗರದ ರಾಕೇಶ್ ಎನ್ನಲಾಗಿದ್ದು, ಹೌಸ್ ಕೀಪಿಂಗ್ ಕೆಲಸ ಮಾಡುವ ಈತ, ನಿನ್ನೆ ಮಧ್ಯಾಹ್ನ ಕಾಯಿಪೇಟೆಯಲ್ಲಿನ ಹೋಟೆಲ್ಲೊಂದರ ಬಳಿ ಅಬ್ದುಲ್ ರಜಾಕ್ ಅಲಿಯಾಸ್ ಪಾಪು ಎಂಬುವರ ಎದೆಗೆ ಚಾಕು ಹಾಕಲು ಹೋದಾಗ ಆತ ತಪ್ಪಿಸಿಕೊಂಡಿದ್ದು, ಚಾಕು ಕೈಗೆ ಬಿದ್ದ ಹಿನ್ನೆಲೆಯಲ್ಲಿ ರಕ್ತದ ಗಾಯಗಳಾಗಿತ್ತು.

ರಜಾಕ್ ತನ್ನ ಸಹೋದರಿಯೊಂದಿಗೆ ಸಲುಗೆ ಬೆಳೆಸಿದ ಎಂಬ ಕಾರಣಕ್ಕೆ ಈ ಕೃತ್ಯ ನಡೆದಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

# ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಸ್ವಾತಂತ್ರ್ಯೋತ್ಸವ

ದಾವಣಗೆರೆ, ಆ. 18- ಐಸಿಎಆರ್ ತರಳ ಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ವತಿಯಿಂದ ನಡೆದ ಸ್ವಾತಂತ್ರ್ಯ ದಿನೋತ್ಸವದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ಧ್ವಜಾರೋಹಣ ನೆರವೇರಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿ ವರ್ಗದವರು ಮೋಟಾರು ರ್‍ಯಾಲಿ ಹಮ್ಮಿಕೊಂಡು ಸ್ವಾತಂತ್ರ್ಯೋತ್ಸವದ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಕೇಸರಿ ಬಣ್ಣದಲ್ಲಿರುವ ನಗರದ ಹೆಮ್ಮೆಯ ವೈದ್ಯರಾದ ದಿ. ಡಾ. ನಿರ್ಮಲ ಕೇಸರಿ ಹಾಗೂ ಅವರ ಸೋದರಿ ದಿ. ಡಾ. ಲೀಲಾ ಕೇಸರಿ ಇವರ ಸಮಾಧಿ ಸ್ಥಳಗಳಿಗೆ ತೆರಳಿ ಗೌರವ ಸಮರ್ಪಣೆ ಮಾಡಲಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹಿರಿಯ ಚೇತನಗಳಾದ ಬಿ.ಎಂ. ಶಿವಲಿಂಗ ಸ್ವಾಮಿ ಹಾಗೂ ತಿಪ್ಪೇಸ್ವಾಮಿ ಅವರುಗಳನ್ನು ಅವರ ಸ್ವಗೃಹಗಳಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಐಸಿಎಆರ್- ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಸ್ಥಾಪನೆ ಮಾಡಿರುವ 17 ರೈತ ಉತ್ಪಾದಕ ಕಂಪನಿ ಕಚೇರಿಗಳಲ್ಲಿ ಈ ವಿಶೇಷ ಸ್ವಾತಂತ್ರ ಉತ್ಸವವನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು.



# ಸಗಟು ಗುತ್ತಿಗೆದಾರನ ವಿರುದ್ಧ ಕ್ರಮದ ಎಚ್ಚರಿಕೆ

**(1ನೇ ಪುಟದಿಂದ)** ರದ್ದುಗೊಳಿಸಿ ಎಂದು ಸಿದ್ದೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

ಗುತ್ತಿಗೆದಾರರು ಕೆಲಸ ಮಾಡದೇ ಇರುವುದನ್ನು ಅಧಿಕಾರಿಗಳು ಏಕೆ ಗಮನಿಸಿ ಕ್ರಮ ತೆಗೆದುಕೊಂಡಿಲ್ಲ? ಅವರು ಕತ್ತೆ ಕಾಯುವುದಕ್ಕೆ ಇರುವವರಂತೆ ಕೆಲಸ ಮಾಡುತ್ತಿದ್ದರೆ ನೀವೇಕೆ ನೋಡಿಕೊಂಡು ಸುಮ್ಮನಿದ್ದೀರಿ? ಅಧಿಕಾರಿಗಳು ಸಭೆಗೆ ನೀಡಿರುವ ಮಾಹಿತಿ ಸಹ ಅಸ್ಪಷ್ಟವಾಗಿದೆ. ಬೇಕೆಂದೇ ಈ ರೀತಿಯ ಅಸ್ಪಷ್ಟ ಮಾಹಿತಿ ಕೊಡಲಾಗುತ್ತಿದೆ ಎಂದು ತರಾಟೆಗೆ ತೆಗೆದುಕೊಂಡರು.

ಸಗಟು ನೀರು ಸರಬರಾಜು ಕಾಮಗಾರಿ ಕೈಗೊಳ್ಳುತ್ತಿರುವ ಎಸ್‌ಇಪಿಸಿ - ಡಿಆರ್‌ಎಸ್ ಐಟಿಪಿಎಲ್ ಜೆವಿ ಕಂಪನಿಗೆ ಈಗಾಗಲೇ 2.25 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ ಎಂದು ಜಲಸಿರಿ ಯೋಜನೆ ಕೈಗೊಳ್ಳುತ್ತಿರುವ ಕೆ.ಯು.ಐ.ಡಿ.ಎಫ್.ಸಿ.ಯ ಅಧಿಕಾರಿ ಮಂಜುನಾಥ್ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಯು.ಐ.ಡಿ.ಎಫ್.ಸಿ. ಟಾಸ್ಕ್ ಮ್ಯಾನೇಜರ್ ದೇವರಾಜ್, ಇದು 83.25 ಕೋಟಿ ರೂ.ಗಳ ಯೋಜನೆಯಾಗಿದೆ. ಯೋಜನೆಯ ಶೇ.10ರಷ್ಟು (8.32 ಕೋಟಿ ರೂ.) ದಂಡ ವಿಧಿಸಿದ ನಂತರವೇ ಗುತ್ತಿಗೆಯನ್ನು ರದ್ದುಗೊಳಿಸಬಹುದು. ಹೀಗಾಗಿ, ಗುತ್ತಿಗೆದಾರ ಕೈಗೊಳ್ಳುತ್ತಿರುವ ಕಾಮಗಾರಿಯ ಮೇಲೆ ಪ್ರತಿದಿನ ಹಾಗೂ ಪ್ರತಿ ವಾರ ನಿಗಾ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಮಾತನಾಡಿ, ಜಲಸಿರಿ ಯೋಜನೆ ಕಾಮಗಾರಿಯನ್ನು ಕೆಲವು ಭಾಗಗಳಲ್ಲಾದರೂ ಪೂರ್ಣಗೊಳಿಸಿ ನೀರು ಪೂರೈಕೆ ಮಾಡಿದರೆ ಜನರಿಂದ ಹೆಚ್ಚು ಸಹಕಾರ ಸಿಗಲು ಸಾಧ್ಯ. ಈ ಬಗ್ಗೆಯೂ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

**ಡಿಸೆಂಬರ್ ಗಡುವು :** ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ನಿರಂತರ ನೀರು ಸರಬರಾಜು ಯೋಜನೆಯ ಕಾಮಗಾರಿಯನ್ನು ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸಬೇಕು. ಮಳೆಯ ಕಾರಣ ಹೇಳಿ ಕಾಮಗಾರಿ ವಿಳಂಬ ಮಾಡಕೂಡದು ಎಂದು ಸಿದ್ದೇಶ್ವರ ತಾಕೀತು ಮಾಡಿದರು.

ಯೋಜನೆಯ ಟಾಸ್ಕ್ ಮ್ಯಾನೇಜರ್ ದೇವರಾಜ ಮಾತನಾಡಿ, ಜಲಸಿರಿ ಯೋಜನೆಗೆ 1336 ಕಿ.ಮೀ ಪೈಪ್‌ಲೈನ್ ವಿತರಣಾ ಮಾರ್ಗ ಹಾಕಬೇಕಾಗಿದೆ. ಅದರಲ್ಲಿ 1080 ಕಿಮೀ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, 275 ಕಿ.ಮೀ ಪೈಪ್ ಲೈನ್ ಕಾಮಗಾರಿ ಬಾಕಿ ಇದೆ. 97,589 ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಬೇಕಾಗಿದ್ದು, ಅದರಲ್ಲಿ ಈಗಾಗಲೇ 50,283 ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ತಹಶೀಲ್ದಾರ್ ಬಸವನಗೌಡ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

# 8 ಯೂಟ್ಯೂಬ್ ಚಾನಲ್‌ಗಳ ತಡೆಗೆ ಕೇಂದ್ರದ ಆದೇಶ

ನವದೆಹಲಿ, ಆ. 18 - ಪಾಕಿಸ್ತಾನದ ಕಾರ್ಯನಿರ್ವಹಿಸುತ್ತಿದ್ದ ಒಂದು ಯೂಟ್ಯೂಬ್ ಚಾನಲ್ ಸೇರಿದಂತೆ ಎಂಟು ಯೂಟ್ಯೂಬ್ ಚಾನಲ್‌ಗಳನ್ನು ಬ್ಲಾಕ್ ಮಾಡಲು ಕೇಂದ್ರ ಸರ್ಕಾರ ಆದೇಶಿಸಿದೆ. ನಕಲಿ ಹಾಗೂ ಸಂಚಲನಾತ್ಮಕ ಚಿತ್ರಗಳು ಹಾಗೂ ದೇಶದ ಭದ್ರತೆ ಕುರಿತು ಅಪಪ್ರಚಾರ ಮಾಡಿದ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

2021ರ ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ ಈ ಕ್ರಮ ತೆಗೆದುಕೊಳ್ಳಲಾಗಿದೆ. ಒಂದು ಪಾಕಿಸ್ತಾನದ ಹಾಗೂ ಏಳು ಭಾರತೀಯ ಚಾನಲ್‌ಗಳನ್ನು ತಡೆದಿರುವುದಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

ಈ ಯೂಟ್ಯೂಬ್ ಚಾನಲ್‌ಗಳು ಒಟ್ಟಾರೆ 114 ವೀಕ್ಷಣೆ ಹಾಗೂ 85.73 ಲಕ್ಷ ಚಂದಾದಾರರನ್ನು ಹೊಂದಿದ್ದವು.

ಲೋಕತಂತ್ರ ಟಿವಿ, ಯುಅಂಡ್‌ವಿ ಟಿವಿ, ಎ ಎಂ ರಜ್ವಿ, ಗೌರವಶಾಲಿ ಪವನ್ ಮಿಥಿಲಾಂಚಲ್, ಸೀ ಟಾಪ್ 5ಟಿಹೆಚ್, ಸರ್ಕಾರಿ ಅಪ್ಡೇಟ್, ಸಬ್ ಕುಚ್ ದೇಖೋ ಹಾಗೂ ಪಾಕಿಸ್ತಾನದ ನ್ಯೂಸ್ ಕಿ ದುನಿಯಾ ಚಾನಲ್‌ಗಳನ್ನು ಬ್ಲಾಕ್ ಮಾಡಲಾಗಿದೆ.

ಜನರನ್ನು ತಪ್ಪು ದಾರಿಗೆ ಎಳೆಯುವ ರೀತಿಯಲ್ಲಿ ಈ ಚಾನಲ್‌ಗಳು ಮಾಹಿತಿ ನೀಡುತ್ತಿದ್ದವು. ಧಾರ್ಮಿಕ ಕೇಂದ್ರಗಳನ್ನು ಸರ್ಕಾರ ಧ್ವಂಸಗೊಳಿಸುತ್ತಿದೆ, ಧಾರ್ಮಿಕ ಉತ್ಸವಗಳ ಮೇಲೆ ನಿಷೇಧ ಹೇರುತ್ತಿದೆ ಹಾಗೂ ಭಾರತದಲ್ಲಿ ಧಾರ್ಮಿಕ ಯುದ್ಧ ಘೋಷಿಸಲಾಗಿದೆ ಎಂದು ಚಾನಲ್‌ಗಳು ತಪ್ಪು ಮಾಡುತ್ತಿದ್ದವು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಇವು ದೇಶದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ತರುವ ರೀತಿಯಲ್ಲಿದ್ದವು. ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಸೈನ್ಯದ ಬಗ್ಗೆ ಇವು ತಪ್ಪು ಮಾಹಿತಿ ನೀಡುತ್ತಿದ್ದವು ಎಂದು ಸರ್ಕಾರ ತಿಳಿಸಿದೆ.

# ಆಗಸ್ಟ್ ಅಂತ್ಯದಲ್ಲಿ ಮತ್ತೆ ಮಳೆ ಅಬ್ಬರ

**(1ನೇ ಪುಟದಿಂದ)** ಮೀಟರ್ ಮಳೆ ಬೀಳಲಿದೆ. ಕರಾವಳಿ ಭಾಗದ ಜಿಲ್ಲೆಗಳಲ್ಲಿ 150 ಮಿಲಿಮೀಟರ್ ಮತ್ತು ಶಿವಮೊಗ್ಗ, ಚಿಕ್ಕಮಗಳೂರು ಭಾಗದಲ್ಲಿ 100 ಮಿಲಿಮೀಟರ್, ಗುಲ್ಬರ್ಗ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ 100 ಮಿಲಿಮೀಟರ್‌ಗಿಂತ ಹೆಚ್ಚಿನ ಮಳೆಯಾಗಲಿದೆ. ಮೇ ಮತ್ತು ಜುಲೈ ತಿಂಗಳಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸುರಿದ ವ್ಯಾಪಕ ಮಳೆಯಿಂದ ಸದ್ಯಕ್ಕೆ ಬಿಡುವು ಸಿಕ್ಕಿದ್ದು, ಬಹುತೇಕ ಜಿಲ್ಲೆಗಳಲ್ಲಿ ಕೊಂಚ ಮೋಡ ಮತ್ತು ಬಿಸಿಲಿನ ವಾತಾವರಣ ಇದೆ.

ಆದರೆ ಆಗಸ್ಟ್ 21 ರ ವೇಳೆಗೆ ಮೋಡ ಕವಿದ ವಾತಾವರಣ ಶುರುವಾಗಲಿದ್ದು ಸಾಧಾರಣ ಮಳೆ ಶುರುವಾಗಲಿದೆ.

ಇದು ಆಗಸ್ಟ್ 26 ರ ವೇಳೆಗೆ ಗಂಭೀರ ಸ್ವರೂಪ ಪಡೆಯಲಿದ್ದು, 29 ರವರೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಮಳೆಯ ಮಾರುತಗಳು ಸದ್ಯಕ್ಕೆ ಆಂಧ್ರ, ಒಡಿಶಾ ಭಾಗದಲ್ಲಿದ್ದು ಶ್ರೀಲಂಕಾದ ಮೇಲೆ ದಟ್ಟವಾಗಿ ಕವಿದಿವೆ. ಈಗಾಗಲೇ ರಾಜ್ಯದಲ್ಲಿ ಸುರಿದ ಮಳೆಯಿಂದ ಅಪಾರ ಪ್ರಮಾಣದ ಆಸ್ತಿ-ಪಾಸ್ತಿ, ಬೆಳೆ ಮತ್ತು ಪ್ರಾಣ ಹಾನಿಯಾಗಿದ್ದು ಸುಮಾರು 5000 ಕೋಟಿ ರೂಗಳಷ್ಟು ನಷ್ಟವಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ಲಭ್ಯವಾಗಿದೆ.



# ಹಿರಿಯ ವನಿತೆಯರ ಪ್ರೇಮಾಲಯಕ್ಕೆ ಒಂದು ತಿಂಗಳ ಊಟದ ವ್ಯವಸ್ಥೆ

ದಾವಣಗೆರೆ, ಆ. 18- ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ಲಯನ್ಸ್ ಹಿರಿಯ ಸದಸ್ಯ ಗಂಗಪ್ಪ ಶೆಟ್ಟಿ ಅವರ ಹುಟ್ಟುಹಬ್ಬದ ಪ್ರಯುಕ್ತ ಲಯನ್ಸ್ ಕ್ಲಬ್ ವತಿಯಿಂದ ಹಿರಿಯ ವನಿತೆಯರ ಪ್ರೇಮಾಲಯಕ್ಕೆ ಒಂದು ತಿಂಗಳ ಊಟದ ವ್ಯವಸ್ಥೆ ಹಾಗೂ ರಶ್ಮಿ ಶಾಲಾ ಮಕ್ಕಳಿಗೆ ಆಶಾಕಿರಣ ಟ್ರಸ್ಟ್‌ನಲ್ಲಿ ಹೋಳಿಗೆ ಊಟದ ವ್ಯವಸ್ಥೆ ಹಾಗೂ ಕೋಲ್ಕುಂಟೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಶಾಲಾ ಕೊಠಡಿ ಕಟ್ಟಲು ಸಾಮಗ್ರಿ ನೀಡಲಾಯಿತು.

ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಎನ್.ಆರ್. ನಾಗಭೂಷಣ್ ರಾವ್, ಕಾರ್ಯದರ್ಶಿ ಕಣವಿ ನಟರಾಜ್, ಖಜಾಂಚಿ ಎಸ್.ಕೆ. ಮಲ್ಲಿಕಾರ್ಜುನ್, ಜಂಟಿ ಕಾರ್ಯದರ್ಶಿ ಭೀಮಾನಂದ ಶೆಟ್ಟಿ, ವಲಯ ಅಧ್ಯಕ್ಷ ಎಸ್. ಓಂಕಾರಪ್ಪ, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಲಯನ್ಸ್ ಜಿಲ್ಲಾ ಛೇರ್ಮನ್ ದೇವರಮನೆ ನಾಗರಾಜ್, ಲಯನ್ಸ್ ಟ್ರಸ್ಟ್ ಖಜಾಂಚಿ ಎಂ.ವಿ. ಬಂಡಿವಾಡ, ಲಯನ್ಸ್ ಸ್ಕೂಲ್ ಛೇರ್ಮನ್ ಆರ್.ಜಿ. ಶ್ರೀನಿವಾಸ್ ಮೂರ್ತಿ, ಲಯನ್ಸ್ ಉಪಾಧ್ಯಕ್ಷ ನೀಲಿ ಉಮೇಶ್, ನಿರ್ದೇಶಕರುಗಳಾದ ಸೋಗಿ ಮುರುಗೇಶ್, ಕೋರಿ ಶಿವಕುಮಾರ್ ಸೇರಿದಂತೆ ಎಲ್ಲಾ ಲಯನ್ಸ್ ಸದಸ್ಯರು ಹಾಗೂ ಗಂಗಪ್ಪ ಶೆಟ್ಟಿ ಕುಟುಂಬದವರು ಉಪಸ್ಥಿತರಿದ್ದರು.

# ಸಂಸ್ಕಾರ ಎಂಬುದು ಅತ್ಯಂತ ಮುಖ್ಯವಾದ ಅಂಶ

## ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಬಿ.ಸಿ. ಉಮಾಪತಿ



ದಾವಣಗೆರೆ,ಆ.18- ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಹಾಗೂ ರಾಷ್ಟ್ರೋತ್ಥಾನ ವಿದ್ಯಾಲಯದ ಸಹಯೋಗದಲ್ಲಿ 76ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸ ಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೆಸರಾಂತ ಜವಳಿ ವರ್ತಕ ಬಿ. ಸಿ. ಉಮಾಪತಿ ಮಾತನಾಡಿ, ಭಾರತ ದೇಶವು ಪ್ರಪಂಚದ ದೇಶಗಳಲ್ಲಿಯೇ ಅತ್ಯಂತ ಎತ್ತರದ ಸ್ಥಾನವನ್ನು ಹೊಂದಿದೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗ ದೇಶವು ಹಲವು ದೇಶಗಳಿಗೆ ಸಹಾಯ ಹಸ್ತವನ್ನು ಚಾಚಿದೆ. ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿಯೂ ಸಹ ವೇಗವಾಗಿ ಮುನ್ನುಗ್ಗುತ್ತಿದೆ. ಇಂದಿನ ದಿನಗಳಲ್ಲಿ ಸಂಸ್ಕಾರ ಎಂಬುದು ಅತ್ಯಂತ ಮುಖ್ಯವಾಗಿರುವ ಅಂಶವಾಗಿದೆ. ಆ ಒಂದು ಮೌಲ್ಯವನ್ನು ರಾಷ್ಟ್ರೋತ್ಥಾನ ಶಾಲೆಗಳು ವಿದ್ಯಾರ್ಥಿಗಳಿಗೆ ಕಲಿಸುತ್ತಿವೆ ಎಂದು ನುಡಿದರು.

ಶಾಲೆಯ ಕಾರ್ಯದರ್ಶಿ ಜಯಣ್ಣ ಮಾತನಾಡಿ, ನಮ್ಮ ಸಂಸ್ಕೃತಿಯು ಎಂದಿಗೂ ಜೀವಂತವಾಗಿರುವಂತಹ ಗುಣವನ್ನು ಹೊಂದಿರುವಂತದ್ದು. ಏಕೆಂದರೆ ಪರಕೀಯರ ಆಕ್ರಮಣಗಳು ನಿರಂತರವಾಗಿ ನಡೆದರೂ ಸಹ, ಗಟ್ಟಿಯಾಗಿ ತನ್ನ ಸಂಸ್ಕೃತಿಯ ಬೇರನ್ನು ಉಳಿಸಿಕೊಂಡಿದೆ ಎಂದರು. ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ಮಕ್ಕಳು ಪಥಸಂಚಲನದಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿದ್ದು, ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಅವರು ಶುಭ ಕೋರಿದರು.

ಸಂಸ್ಥೆಯ ಸಂಚಾಲಕ ಶಂಭುಲಿಂಗಪ್ಪ, ಪ್ರಾಂಶುಪಾಲರಾದ ಮಂಜುನಾಥ್ ಹಾಗೂ ಶ್ರೀಮತಿ ಸುಗುಣ ಮತ್ತು ಪರಿಷತ್ತಿನ ಸದಸ್ಯರಾದ ಗಿರೀಶ್, ವಿನಾಯಕ ರಾನಡೆ ಅವರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಾದ ದಿವ್ಯ ಭಾರತಿ ನಿರೂಪಿಸಿದರು, ಸೌಮ್ಯ ಆಚಾರ್ ಸ್ವಾಗತಿಸಿದರು, ವಿದ್ಯಾ ವಂದಿಸಿದರು.

# 'ಕೃಷ್ಣನಿಗೆ ಏಕೆ ಅವಲಕ್ಕಿ ಇಷ್ಟ?'



**ಇಂದು ಶ್ರೀ ಕೃಷ್ಣ ಜನ್ಮಾಷ್ಟಮಿ, ತನ್ನಿಮಿತ್ತ ಈ ವಿಶೇಷ ಕಿರು ಲೇಖನ. ಸುಧಾಮ ಕೃಷ್ಣನಿಗೆ ಅವಲಕ್ಕಿ ಕೊಟ್ಟ, ಕೃಷ್ಣ ಅದನ್ನು ಇಷ್ಟಪಟ್ಟ. ಏಕೆಂದು ಕೃಷ್ಣನೇ ಹೇಳಿರುವ ಸಾರಾಂಶ ಇಲ್ಲಿದೆ.**

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಕರ್ತ.

ಶ್ರೀ ಕೃಷ್ಣನ ಸಹಪಾಠಿಯಾದ ಸುಧಾಮನು ಅಂದರೆ ಕುಚೇಲನು ಕೃಷ್ಣನನ್ನು ಭೇಟಿಯಾಗಲು ಹೋಗುವಾಗ ಹಿಡಿ ಅವಲಕ್ಕಿಯನ್ನು ತೆಗೆದುಕೊಂಡು ಹೋಗಿ ಅತ್ಯಂತ ಸಂಕೋಚದಿಂದ ಕೃಷ್ಣನಿಗೆ ಕೊಟ್ಟಾಗ, ಕೃಷ್ಣ ಅದನ್ನು ಇಷ್ಟಪಟ್ಟು ಪ್ರೀತಿಯಿಂದ ತಿಂದ ಎಂದು ಹೇಳಲಾಗುತ್ತದೆ. ಅಂದರೆ ಕೃಷ್ಣನಿಗೆ ವಸ್ತು ರೂಪದ ಅವಲಕ್ಕಿ ಅಷ್ಟೊಂದು ಇಷ್ಟವೇ? ಈ ಬಗ್ಗೆ ಭಗವಾನ್ ಶ್ರೀಕೃಷ್ಣನೇ ಭಾಗವತದ 22ನೇ ಅಧ್ಯಾಯದ ದಶಮಸ್ಕಂದದಲ್ಲಿ ಅಭಿಪ್ರಾಯಪಟ್ಟಿರುವನೆಂದು ಪ್ರಾಜ್ಞರು ಹೇಳುವ ಅಂಶವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳಲಿಚ್ಛಿಸುವೆ.

ಹಾಗಾದರೆ ವಸ್ತು ರೂಪದ ಅವಲಕ್ಕಿ ತಯಾರಾಗುವ ವಿಧಾನವನ್ನು ಮೊದಲು ಅವಲೋಕಿಸೋಣ, ಭತ್ತವನ್ನು ನೀರಿನಲ್ಲಿ ಮುಳುಗಿಸಿ ತೋಯಿಸಬೇಕು, ಹಾಗೆ ತೊಯ್ದ ಭತ್ತವನ್ನು ಓಡಿನಲ್ಲಿ ಅರ್ಥಾತ್ ಬಾಣಲೆಯಲ್ಲಿ ಹುರಿಯಬೇಕು. ನಂತರ ಅದನ್ನು ಒನಕೆಯಿಂದ ಕುಟ್ಟಿ ಕುಟ್ಟಿ ಸಿಪ್ಪೆ ತೆಗೆದು ವಿಸ್ತಾರವಾಗುವಂತೆ ಮಾಡಬೇಕು. ಇದರ ಅರ್ಥ 'ನಾವು ಭಕ್ತಿಯಲ್ಲಿ ಮುಳುಗಿ ತೋಯಬೇಕು, ನಂತರ ಕರ್ಮವೆಂಬ ಓಡಿನಲ್ಲಿ ಹುರಿಯಲ್ಪಟ್ಟು ಅಂದರೆ ಬೆಂದು, ನಂತರ ಜ್ಞಾನವೆಂಬ ಒನಕೆಯ ಪೆಟ್ಟಿಗೆ ಅಹಂಕಾರವೆಂಬ ಸಿಪ್ಪೆಯನ್ನು ಕಳಚಿಕೊಂಡು ಹೃದಯ ವಿಸ್ತಾರವಾಗ ಬೇಕು ಇದು ವೈರಾಗ್ಯ, ಇದೇ ಪರಿಪಕ್ವಗೊಳ್ಳುವಿಕೆ. ಭತ್ತವನ್ನು ಹಾಗೇ ತಿನ್ನಲು ಹೋದರೆ ಬಾಯಿಯೊಳಗೆ ಗಾಯವಾಗಿ ನೋವಾಗುತ್ತದೆ, ಅಕ್ಕಿ ಮಾಡಿಕೊಂಡು ತಿಂದರೆ ಹೊಟ್ಟೆ ನೋಯುತ್ತದೆ, ಅವಲಕ್ಕಿ ಮಾಡಿಕೊಂಡು ತಿಂದರೆ ಬಾಯಿಗೂ ಹಿತ, ಹೊಟ್ಟೆಗೂ ಹಿತ. ಹೀಗೆ ಪರಿಪಕ್ವಗೊಂಡ ಅವಲಕ್ಕಿ ಮತ್ತೆ ಮೊಳಕೆಯೊಡೆಯುವುದಿಲ್ಲ, ಭತ್ತವೆಂದರೆ ಮೊಳಕೆಯೊಡೆಯುತ್ತದೆ. ಅಂದರೆ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಪರಿಪಕ್ವಗೊಂಡವರಿಗೆ ಪುನರ್ಜನ್ಮವಿಲ್ಲ ಎಂದರ್ಥ. ಇದೇ ಕೃಷ್ಣ ಪ್ರೀತಿ. ಈ ಅರ್ಥದಲ್ಲಿ ಶ್ರೀ ಕೃಷ್ಣನಿಗೆ ಅವಲಕ್ಕಿ ತತ್ವ ಪ್ರೀತಿಯೇ ವಿನಃ ವಸ್ತು ರೂಪದ ಅವಲಕ್ಕಿ ಅಲ್ಲ. ನಾವು ಅವಲಕ್ಕಿಯನ್ನು ಕೃಷ್ಣನಿಗೆ ನೈವೇದ್ಯ ಮಾಡಿದಾಕ್ಷಣ, ನೈವೇದ್ಯ ಮಾಡಿದ ಅವಲಕ್ಕಿಯನ್ನು ನಾವು ಸೇವಿಸಿದಾಕ್ಷಣ ಕೃಷ್ಣ ಪ್ರೀತಿಯನ್ನು ಪಡೆದೆವೆಂದರೆ, ಪಡೆಯುತ್ತೇವೆ ಎಂದರೆ ಅದು ಬರೀ ಭ್ರಮೆ ಅಷ್ಟೇ. ಅವಲಕ್ಕಿಯಂತೆ ನಾವು ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಪರಿಪಕ್ವಗೊಂಡವರು ಮೊಳಕೆಯೊಡೆಯದೇ ಭಯ, ಶೋಕ, ಮೋಹಗಳಿಂದ ಕೂಡಿದ ಜನ್ಮಜನ್ಮಾಂತರಗಳಿಂದ ಪುನರ್ಜನ್ಮವಿರದ ಮೋಕ್ಷ ಪಡೆಯುತ್ತೇವೆ ಎಂದರ್ಥ. ಇದೇ ಶ್ರೀ ಕೃಷ್ಣನ ಅವಲಕ್ಕಿ ಪ್ರೀತಿಯ ತತ್ವಾರ್ಥ. ಈ ತತ್ವಾರ್ಥವಿರುವುದರಿಂದಲೇ ಅವಲಕ್ಕಿಯು ಶ್ರೀ ಗಣಪತಿಗೂ ಪ್ರೀತಿ, ಗಣಹೋಮದ ಅಷ್ಟದ್ರವ್ಯಕ್ಕೂ ಅವಲಕ್ಕಿ ಬೇಕು.

# ಆಗಸ್ಟ್ 19, ಚೀಟಿ ನಿಧಿಗಳ ದಿನಾಚರಣೆ

ಕರ್ನಾಟಕದ ಮಧ್ಯ ಭಾಗದಲ್ಲಿರುವ ದಾವಣಗೆರೆ ನಗರ ವ್ಯಾಪಾರ, ಶೈಕ್ಷಣಿಕ ಮತ್ತು ಕಾರಾ ಮಂಡಕ್ಕಿ ಹಾಗೂ ಬೆಣ್ಣೆ ದೋಸೆಗಳಿಗೆ ಹೆಸರಾದಂತೆ ನಗರದಲ್ಲಿ ವಿವಿಧ ರೀತಿಯ ಸಹಕಾರಿ ಬ್ಯಾಂಕ್‌ಗಳೂ ಹಾಗೂ ಚೀಟಿ ನಿಧಿ ಕಂಪನಿಗಳೂ ನಗರದ ಲಕ್ಷಾಂತರ ಜನರ ಆರ್ಥಿಕ ಅಗತ್ಯತೆಗಳನ್ನು ಪೂರೈಸುವಲ್ಲಿ ಕ್ರಿಯಾಶೀಲವಾಗಿವೆ.

ಇಂದು ಆಗಸ್ಟ್ 19, 1982 ರ ಈ ದಿನ ಅನಧಿಕೃತ ಚೀಟಿ ನಿಧಿಗಳ ನಿರ್ಬಂಧ ಮತ್ತು ಅಧಿಕೃತ ಚೀಟಿ ನಿಧಿಗಳ ನಿರ್ವಹಣೆಯ ಕಾರ್ಯಸೂಚಿಗಾಗಿ ದೇಶದ ಸಂಸತ್‌ನಲ್ಲಿ 'ಚೀಟಿ ನಿಧಿಗಳ ಕಾಯ್ದೆ 1982' ಅನುಮೋದನೆಗೊಂಡು, 02-04-1984 ರಿಂದ ದೇಶಾದ್ಯಂತ ಜಾರಿಯಾಯಿತು. ಇದರಿಂದ ಅನಧಿಕೃತ ಚೀಟಿ ನಿಧಿಗಳ ಕೆಲ ನಿರ್ವಾಹಕರುಗಳ ಮತ್ತು ಸದಸ್ಯರುಗಳ ದುರಾಸೆ, ಸ್ವಜನ ಪಕ್ಷಪಾತ ಮತ್ತು ಅಸಮರ್ಥ ನಿರ್ವಹಣೆಯಿಂದ ಅನ್ಯಾಯಕ್ಕೊಳಗಾಗುತ್ತಿದ್ದ ಲಕ್ಷಾಂತರ ಚೀಟಿ ಸದಸ್ಯರುಗಳಿಗೆ ಈ ಕಾಯ್ದೆ ಬಲ ತುಂಬಿದೆ. ಆದ್ದರಿಂದ ಚೀಟಿ ನಿಧಿಗಳ ಮೇಲಿನ ಅಪನಂಬಿಕೆಗಳನ್ನು ದೂರ ಮಾಡಲು ಹಾಗೂ ಸಾರ್ವಜನಿಕ ಜಾಗೃತಿಗಾಗಿ ಪ್ರತಿ ವರ್ಷ ಆಗಸ್ಟ್ 19 ರ ದಿನವನ್ನು 'ಚೀಟಿ ನಿಧಿಗಳ ದಿನಾಚರಣೆ'ಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ನೋಂದಾಯಿತ ಚೀಟಿ ನಿಧಿಗಳು ದಾವಣಗೆರೆ ಜಿಲ್ಲೆಯಲ್ಲಿ ಮುಂಚಿನಿಂದಲೂ ಲಕ್ಷಾಂತರ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಜನರ ಉಳಿತಾಯ ಮತ್ತು ಹಣದ ಅವಶ್ಯಕತೆಗಳನ್ನು ಪೂರೈಸುತ್ತಾ ಬಂದಿವೆ. 1982 ರ ಚೀಟಿ ನಿಧಿಗಳ ಕಾಯ್ದೆಯಡಿ ನೋಂದಾಯಿತವಾದ ಚೀಟಿ ಸಂಸ್ಥೆ ಹಾಗೂ ಕಂಪನಿಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಗಳಿಗೊಳಪಟ್ಟು ಬ್ಯಾಂಕೇತರ ಹಣಕಾಸು ಕಂಪನಿಗಳ ವರ್ಗದಲ್ಲಿ ರಾಜ್ಯ ಸರ್ಕಾರದ ಸಹಕಾರ ಇಲಾಖೆಯ ನಿಗಾದಲ್ಲಿ ಕಾರ್ಯನಿವಹಿಸುತ್ತವೆ. ಸಹಕಾರಿ ಬ್ಯಾಂಕುಗಳಿಗೂ ಚೀಟಿ ನಿಧಿಗಳಿಗೂ ಇರುವ ವ್ಯತ್ಯಾಸವೇನೆಂದರೆ ಬ್ಯಾಂಕುಗಳು ಚೀಟಿಗಳನ್ನು ನಿರ್ವಹಿಸುವಂತಿಲ್ಲ ಹಾಗೂ ಚೀಟಿ ನಿಧಿ ಕಂಪನಿಗಳು ಬ್ಯಾಂಕುಗಳ ರೀತಿ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ ಹಾಗೂ ಉಳಿತಾಯ ಮತ್ತು ಚಾಲ್ತಿ ಖಾತೆಗಳನ್ನು ನಿರ್ವಹಿಸುವಂತಿಲ್ಲ, ಉಳಿದಂತೆ ಇಬ್ಬರೂ ಸಾಲ ನೀಡಿರುವ ಹಣದ ಭದ್ರತೆಗೆ ಚರಾಸ್ತಿ, ಸ್ಥಿರಾಸ್ತಿಗಳನ್ನು, ವಾಹನಗಳನ್ನು, ಜೀವ ವಿಮಾ ಪಾಲಿಸಿಗಳನ್ನು, ಬ್ಯಾಂಕ್ ಗ್ಯಾರಂಟಿಗಳನ್ನು ಭದ್ರತೆಯಾಗಿ ಪಡೆಯುತ್ತವೆ ಮತ್ತು ಕಟ್ಟು ಬಾಕಿಗಳ ವಸೂಲಿಗೆ ಇಬ್ಬರಿಂದಲೂ ಒಂದೇ ನ್ಯಾಯಾಲಯದಲ್ಲಿ ದಾವೆ ಹೂಡಲಾಗುತ್ತೆ ಹಾಗೂ ಕಾನೂನು ಪ್ರಕ್ರಿಯೆಯಲ್ಲಿ ಒಂದೇ ವಿಧಾನವನ್ನು ಅನುಸರಿಸುತ್ತವೆ. ಆದ್ದರಿಂದ ನೋಂದಾಯಿತ ಚೀಟಿ ನಿಧಿಗಳು ನಿಮ್ಮ ಉಳಿತಾಯಗಳಿಗೆ ಸುಭದ್ರ ಹೂಡಿಕೆಯಾಗಿ ಮತ್ತು ನಿಮ್ಮ ಹಣದ ಅವಶ್ಯಕತೆಗಳಿಗೆ ಅನುಕೂಲಕರ ನಿಧಿಯಾಗಿ ಕಾರ್ಯನಿರ್ವಹಿಸುತ್ತವೆ. ಬ್ಯಾಂಕುಗಳು ನಿರ್ದಿಷ್ಟ ಉದ್ದೇಶಗಳಿಗೆ ಮಾತ್ರ ಸಾಲ ನೀಡುತ್ತವೆ ಆದರೆ ಚೀಟಿ ನಿಧಿಗಳಿಂದ ನೀವು ಪಡೆವ ಹಣವನ್ನು ನಿಮ್ಮ ವಿವಿಧ ಅವಶ್ಯಕತೆಗಳಿಗೆ ಬಳಸಬಹುದು. ಯಾವುದೇ ಕಟ್ಟುಪಾಡುಗಳು ಇರುವುದಿಲ್ಲ. ಆದ್ದರಿಂದ ನೋಂದಾಯಿತ ಚೀಟಿ ನಿಧಿಗಳು ಎಲ್ಲಾ ವರ್ಗದವರಿಗೂ ಅನುಕೂಲಕರವಾಗಿವೆ.

ಚೀಟಿ ನಿಧಿಗಳು 1982 ರ ಕಾಯ್ದೆ ಜಾರಿಯಾದ ನಂತರದಲ್ಲಿ ಕೆಲ ಬೆರಳೆಣಿಕೆಯಷ್ಟು ಚೀಟಿ ನಿಧಿಗಳು ಮಾತ್ರ ಅಧಿಕೃತ ಚೀಟಿ ಸಂಸ್ಥೆಗಳಾಗಿ ನೋಂದಣೆಗೊಂಡವು ಮತ್ತು ಇನ್ನುಳಿದ ನೂರಾರು ಚೀಟಿ ನಿಧಿಗಳು ಅನಧಿಕೃತವಾಗಿಯೇ ಕಾರ್ಯನಿರ್ವಹಿಸುತ್ತಾ ಬಂದವು, ಯಾವಾಗ ಚೀಟಿ ನಿಧಿ ಸದಸ್ಯರಲ್ಲಿ ನಿಯತ್ತು ಕಡಿಮೆಯಾಗಿ ಹಣ ಮರುಪಾವತಿಸದೇ ವಂಚಿಸುತ್ತಾ ಬಂದರೋ ಆಗ ಎಚ್ಚೆತ್ತುಕೊಂಡ ಕೆಲ ಚೀಟಿ ನಿಧಿಗಳು ಅಧಿಕೃತವಾಗಿ ಕಾಯ್ದೆ ಪ್ರಕಾರ ಚೀಟಿ ಹಣ ವಸೂಲಾತಿಗೆ ಕಾನೂನಿನ ಬಲ ಸಿಗುತ್ತದೆಂದು ನೋಂದಣೆಗೊಂಡರೆ ಇನ್ನುಳಿದವು ನಷ್ಟ ಅನುಭವಿಸಿ ಉಳಿದ ಸದ್ಯಸರುಗಳಿಗೆ ಹಣ ನೀಡದೆ ಕೈ ಎತ್ತಿದವು. ಕಳೆದ ಹತ್ತು ವರ್ಷಗಳಿಂದೀಚೆಗೆ ಚೀಟಿ ಸಂಸ್ಥೆಗಳ ನೋಂದಣಿ ಹೆಚ್ಚಿದರೂ ಪ್ರತಿಯೊಂದು ಚೀಟಿ ಗುಂಪುಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಿ, ಚೀಟಿ ಗುಂಪಿನ ಮೊತ್ತವನ್ನು ಬ್ಯಾಂಕಿನಲ್ಲಿ ಠೇವಣಿಯಿರಿಸಿ, ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಕಮ್ಮಿಯಿವೆ. ಇದಕ್ಕೆ ಸಾರ್ವಜನಿಕರೂ ಮತ್ತು ಈ ಬಗ್ಗೆ ಕಟ್ಟುನಿಟ್ಟಾಗಿ ಕಾನೂನನ್ನು ಜಾರಿಗೊಳಿಸುವಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆಯೂ ಕಾರಣವಾಗಿದೆ. ಈ ಬಗ್ಗೆ ಸಾರ್ವಜನಿಕರು ತಾವು ಸದಸ್ಯರಾಗಿ ಹಣ ಕಟ್ಟುವ ಮುಂಚೆ ಸಂಸ್ಥೆಯವರು ಚೀಟಿ ಗುಂಪನ್ನು ನೋಂದಣಿ ಮಾಡಿಸಿದ್ದಾರೆಯೇ ಎಂದು ಸರ್ಕಾರದಿಂದ ಕೊಡುವ ಪೂರ್ವ ಮಂಜೂರಾತಿ ಆದೇಶ ಪತ್ರದ (PSO) ನೆರಳಚ್ಚು ಪ್ರತಿಯನ್ನು ಕೇಳಿ ಪಡೆಯಬೇಕು. ಬಹಳಷ್ಟು ಜನ ಈ ಬಗ್ಗೆ ನಿರ್ಲಕ್ಷ್ಯದಿಂದ ಅಧಿಕೃತ ಚೀಟಿ ಸಂಸ್ಥೆಯವರು ನಡೆಸುವ ಅನಧಿಕೃತ ಚೀಟಿ ಗುಂಪಿನಲ್ಲಿ ಹಣ ಕಟ್ಟಿ ಜಿಲ್ಲೆಯ ಬಹಳಷ್ಟು ಜನರು ಹಣ ಕಳೆದುಕೊಂಡಿದ್ದಾರೆ. ಇಂತಹವರಿಂದಾಗಿ ಪ್ರತಿ ಚೀಟಿ ಗುಂಪನ್ನು ಪರವಾನಿಗೆ ಪಡೆದು ಕಾನೂನು ಬದ್ಧವಾಗಿ ನಡೆಸುವ ಚೀಟಿ ಸಂಸ್ಥೆಗಳನ್ನೂ ಕೂಡಾ ಸಾರಾಸಗಟಾಗಿ ಅನುಮಾನದ ದೃಷ್ಟಿಯಿಂದ ನೋಡುವಂತಾಗಿದೆ. ಒಂದು ಪಕ್ಷ ಚೀಟಿ ಗುಂಪು ನೋಂದಾಯಿತವಾಗಿದ್ದಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ದೂರು ನೀಡಿ ಪರವಾನಿಗೆ ಪಡೆಯಲು ನೀಡಲಾಗಿದ್ದ ಬ್ಯಾಂಕ್ ಠೇವಣಿಯನ್ನು ಮುಟ್ಟುಗೋಲು ಹಾಕಿಸಬಹುದು ಹಾಗೂ ಚೀಟಿ ಸಂಸ್ಥೆಗಳನ್ನು ನಿಯಂತ್ರಿಸುವ ಸಹಕಾರ ಇಲಾಖೆಯು ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅನಧಿಕೃತ ಚೀಟಿ ಗುಂಪುಗಳನ್ನು ನಡೆಸುವ ಚೀಟಿ ಸಂಸ್ಥೆಗಳ ಪರವಾನಿಗೆ ರದ್ದು ಮಾಡಿ, ದಂಡ ವಿಧಿಸಬೇಕು ಮತ್ತು ಚಂದಾದಾರರೂ ಕೂಡಾ ಅಧಿಕೃತ ಚೀಟಿಗಳಲ್ಲಿ ತೆರಿಗೆ ಕಟ್ಟಬೇಕು ಮತ್ತು ಜಾಮೀನುದಾರರನ್ನು ಹಾಗೂ ದಾಖಲಾತಿಗಳನ್ನು ಒದಗಿಸಬೇಕಾಗುತ್ತೆದೆಂದು ಚೀಟಿ ಸಂಸ್ಥೆಗಳನ್ನು ಅನಧಿಕೃತ ಚೀಟಿ ಗುಂಪುಗಳನ್ನು ನಡೆಸಿ ಎಂದು ಒತ್ತಾಯಿಸಬಾರದು.

ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವು ಈ ಮುಂದಿನ ಭದ್ರತೆ ಹಾಗೂ ಸವಲತ್ತುಗಳನ್ನು ಚೀಟಿ ಚಂದಾದಾರರಿಗೆ ಒದಗಿಸಬೇಕು, (1) ಬ್ಯಾಂಕುಗಳ ಠೇವಣಿದಾರರಿಗೆ ಇರುವ ವಿಮಾ ಭದ್ರತೆಯನ್ನು ಚೀಟಿ ನಿಧಿ ಚಂದಾದಾರರಿಗೂ ಕಲ್ಪಿಸಬೇಕು. (2) ಐದು ಲಕ್ಷ ರೂಗಳವರೆಗಿನ ಚೀಟಿ ಗುಂಪುಗಳಿಗೆ ಭದ್ರತಾ ಠೇವಣಿ ಇಡುವುದರಿಂದ ಹಾಗೂ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕು. ಐದು ಲಕ್ಷ ಮೇಲ್ಪಟ್ಟ ಚೀಟಿಗಳನ್ನು 6% GST ವ್ಯಾಪ್ತಿಗೆ ತರಬೇಕು (3) ಚೀಟಿ ಒಪ್ಪಂದದ ಕರಾರು ಪತ್ರ ನೋಂದಣಿಗೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಬೇಕು (4) ನೋಂದಾಯಿತ ಚೀಟಿ ನಿಧಿ ಸಂಸ್ಥೆಗಳ ಆನಧಿಕೃತ ಚೀಟಿ ಗುಂಪುಗಳ ಮಟ್ಟ ಹಾಕಲು ಚೀಟಿ ನಿಧಿ ಉಪ ನಿಬಂಧಕರ ಕಛೇರಿಯಿಂದ ಚೀಟಿ ನಿಧಿ ಸಂಸ್ಥೆಗಳು ಪಡೆವ ಹೊಸ ಚೀಟಿ ಗುಂಪುಗಳ ಪರವಾನಿಗೆಯ ವಿವರಗಳನ್ನು ಪ್ರತಿ ತಿಂಗಳೂ ಪತ್ರಿಕಾ ಪ್ರಕಟಣೆ ಹೊರಡಿಸಬೇಕು (5) ವೃತ್ತಿಪರ ಹಾಗೂ ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸಲು ಸಹಾಯಕ ವಾಗುವಂತೆ ನಿರ್ಬಂಧಕರುಗಳ ನ್ಯಾಯಾಲಯಗಳಲ್ಲಿ ದಾಖಲಾಗುವ ಬಾಕಿ ವಸೂಲಾತಿ ಪ್ರಕರಣಗಳ ವಿವರಗಳನ್ನು ಪ್ರತಿ ತಿಂಗಳೂ ಚೀಟಿ ನಿಧಿ ಸಂಸ್ಥೆಗಳಿಗೆ ಒದಗಿಸ ಬೇಕು (6) 1982 ರ ಚೀಟಿ ನಿಧಿಗಳ ಕಾಯ್ದೆ ಯನ್ನು ಬದಲಾದ ಈಗಿನ ವ್ಯವಹಾರಿಕಾ ಕಾಲ ಮಾನಕ್ಕೆ ತಕ್ಕಂತೆ ತಿದ್ದುಪಡಿಗಳನ್ನು ತರಲು ಚೀಟಿ ನಿಧಿ ಕಂಪನಿಗಳು, ಸಹಕಾರ ಇಲಾಖೆಯ ಅಧಿಕಾರಿಗಳು ಮತ್ತು ಚಂದಾದಾರರೊಳಗೊಂಡ ರಾಷ್ಟ್ರ ಮಟ್ಟದ ಸಮಿತಿಯನ್ನು ರಚಿಸಿ ಅದರ ಶಿಫಾರಸುಗಳನ್ನು 40 ವರ್ಷಗಳಷ್ಟು ಹಳೆಯದಾದ 1982 ರ ಚೀಟಿ ನಿಧಿಗಳ ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ತರಬೇಕು.

2012 ರಲ್ಲಿ ದಾವಣಗೆರೆ ಜಿಲ್ಲೆಯ ಚೀಟಿ ನಿಧಿ ಸಂಸ್ಥೆಗಳು ಮತ್ತು ಕಂಪನಿಗಳು ಸೇರಿಕೊಂಡು ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘ ರಚಿಸಿಕೊಂಡು ಸಾರ್ವಜನಿಕರಿಗೆ ಯಾವುದೇ ತರದ ಚೀಟಿ ನಿಧಿಗಳಿಂದ ಅನಾನುಕೂಲವಾಗಿದ್ದಲ್ಲಿ ಸೂಕ್ತ ಪರಿಹಾರದ ಮಾರ್ಗಗಳನ್ನು ತಿಳಿಸಿ ಮತ್ತೊಮ್ಮೆ ಈ ರೀತಿಯಾಗದಂತೆ ಎಚ್ಚರವಹಿಸಲು ತಿಳುವಳಿಕೆ ನೀಡಲಾಗುತ್ತಿದೆ ಮತ್ತು ಚೀಟಿ ನಿಧಿಗಳ ಮೇಲಿನ ಅಪನಂಬಿಕೆಗಳನ್ನು ದೂರ ಮಾಡಲು ಹಾಗೂ ಸಾರ್ವಜನಿಕ ಜಾಗೃತಿ ಗಾಗಿ ಪ್ರತಿ ವರ್ಷ ಆಗಸ್ಟ್ 19 ರ ದಿನವನ್ನು 'ಚೀಟಿ ನಿಧಿಗಳ ದಿನಾಚರಣೆ'ಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರು ತಾವು ಸದಸ್ಯರಾಗಿ ಹಣ ಕಟ್ಟುವ ಮುಂಚೆ ಸಂಸ್ಥೆಯವರು ಚೀಟಿ ಗುಂಪನ್ನು ನೊಂದಣೆ ಮಾಡಿಸಿದ್ದಾರೆಯೇ ಎಂದು ಸರ್ಕಾರದಿಂದ ಕೊಡುವ ಪೂರ್ವ ಮಂಜೂರಾತಿ ಆದೇಶ ಪತ್ರದ (PSO) ನೆರಳಚ್ಚು ಪ್ರತಿಯನ್ನು ಕೇಳಿ ಪಡೆಯಬೇಕು. RBI ಹೇಳುತ್ತೆ 'ಜಾಣರಾಗಿರಿ ಜಾಗರೂಕರಾಗಿರಿ'.



**- ಅಂದನೂರು ರಾಜೇಶ್**, ಮಾಲೀಕರು, ಅಂದನೂರು ಚಿಟ್ಸ್ ಹಾಗೂ ಕಾರ್ಯದರ್ಶಿ, ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘ, ದಾವಣಗೆರೆ.

# ಇಂದು ವಿಶ್ವ ಛಾಯಾಗ್ರಹಣ ದಿನ



'ಛಾಯಾಗ್ರಹಣ' ಅಂದರೆ 'ಫೋಟೋಗ್ರಫಿ' ಎಂಬುದು ಇಲ್ಲದೇ ಹೋಗಿದ್ದರೆ ಇತಿಹಾಸದ ನೈಜ ದಾಖಲೆಗಳೇ ಇಲ್ಲದೆ ಹೋಗುತ್ತಿತ್ತು. ಅಲ್ಲದೇ ನಮ್ಮ ಹಿರಿಯರು ಹೇಗಿದ್ದರು? ಎಂಬುದೂ ಕಾಣದಂತಾಗುತ್ತಿತ್ತು. ಬಾಹ್ಯಾಂತರಿಕ್ಷದ ರಹಸ್ಯ ಭೇದಿಸುವ ಉಪಗ್ರಹ ಕ್ಯಾಮರಾದಿಂದ ಮೊದಲ್ಗೊಂಡು ಸಮುದ್ರದಾಳದ ರಹಸ್ಯವನ್ನು ತೆರೆದು ತೋರಿಸುವ ಕ್ಯಾಮರಾಗಳವರೆಗೆ, ಮನುಷ್ಯನ ದೇಹದ ಒಳಗಿನ ವ್ಯವಹಾರಗಳನ್ನು ಕಾಣಿಸುವ ಎಕ್ಸರೆ, ಸ್ಕ್ರೀನಿಂಗ್, ಸ್ಕ್ಯಾನಿಂಗ್, ಸಿನಿಮಾಟೋಗ್ರಫಿ, ಆಧುನಿಕ ಟೆಲಿವಿಷನ್, ಮೊಬೈಲ್ ಕ್ಯಾಮರಾಗಳವರೆಗೆ ಫೋಟೋಗ್ರಫಿ ತಂತ್ರಜ್ಞಾನವು ಸರ್ವವ್ಯಾಪಿಯಾಗಿದೆ. ಇಂತಹ ಫೋಟೋಗ್ರಫಿಯ ಮಹತ್ವವನ್ನು ಸ್ಮರಿಸುವ 'ವಿಶ್ವ ಛಾಯಾಗ್ರಹಣ ದಿನಾಚರಣೆ' ಪ್ರತಿವರ್ಷದಂತೆ ಇಂದು ಸಹಾ ಆಚರಿಸಲಾಗುತ್ತಿದ್ದು, ಇದರ ಸಂಕ್ಷಿಪ್ತ ಇತಿಹಾಸ ಹೇಳಬೇಕೆಂದರೆ ಕ್ರಿ.ಶ 1289ರ ವೇಳೆಗೆ ಚಿತ್ರಕಲಾವಿದರುಗಳಾದ ರೋಗರ್ ಬ್ಯಾಕೋನ್, ಲಿಯೋನಾರ್ಡೋ ಡಾವಿಂಚಿ ಹಾಗೂ ಅಲ್ಬರ್ಟಿ ಮುಂತಾದವರು 'ಕ್ಯಾಮರ ಅಬ್ಸ್ಯೂರ್' (ಲ್ಯಾಟಿನ್ ಭಾಷೆ) ಅರ್ಥ 'ಕತ್ತಲು ಕೋಣೆ' ಇದನ್ನು ದೃಶ್ಯಚಿತ್ರಗಳ ರಚನೆಗಾಗಿ ರೇಖಾಚಿತ್ರ ಸಿದ್ಧಪಡಿಸಿಕೊಳ್ಳಲು ಸೃಷ್ಟಿಸಿ ಬಳಸಿದರು. ಇದೇ ಮುಂದೆ 'ಮಸೂರ' ಅಂದರೆ 'ಲೆನ್ಸ್' ಅಳವಡಿಸಲ್ಪಟ್ಟು 'ಕ್ಯಾಮರಾ' ಎಂದಾಯಿತು.

ಈ ಕ್ಯಾಮರಾವನ್ನು ಉಪಯೋಗಿಸಿ, 1816ರ ವೇಳೆಗೆ ವಿಶ್ವದ ಮೊಟ್ಟಮೊದಲ ಛಾಯಾಚಿತ್ರವನ್ನು ತೆಗೆಯಲಾಯಿತಾದರೂ ಶಾಶ್ವತ ಛಾಯಾಚಿತ್ರಗಳನ್ನು ಪಡೆಯುವ ರಾಸಾಯನಿಕ ಸೂತ್ರಗಳ ಆವಿಷ್ಕಾರ 1833 ರ ವೇಳೆಗೆ ಫ್ರಾನ್ಸಿನ ವಿಜ್ಞಾನಿ ಮತ್ತು ಸಂಶೋಧಕ ನಿಪ್ಸೆ ಜೋಸೆಫ್ ನೈಸ್ಫೋರ್ ಮತ್ತು ಫ್ರಾನ್ಸಿನ ಕಲಾವಿದ ಮತ್ತು ಸಂಶೋಧಕ ಡಾಗ್ರೇ ಲೂಯಿಸ್ ಜಾಕ್ವೆಸ್ ಮಂಡೆ ಇವರು ಸಂಶೋಧನೆ ಮಾಡಿ ಕಂಡುಹಿಡಿದರು. ಫ್ರೆಂಚ್ ಅಕಾಡೆಮಿ ಆಫ್ ಸೈನ್ಸಸ್ ಮುಂದೆ ಈ ಸೂತ್ರವನ್ನು ಇಡಲಾಯಿತು.

ಫ್ರೆಂಚ್ ಸರ್ಕಾರವು ಈ ಸಂಶೋಧನಾ ಸೂತ್ರವು 'ಫ್ರೀ ಟು ವರ್ಲ್ಡ್' ಅಂದರೆ 'ವಿಶ್ವದ ಎಲ್ಲರೂ ಇದನ್ನು ಉಚಿತವಾಗಿ ಬಳಸಬಹುದು' ಎಂದು 1839 ಆಗಸ್ಟ್ 19 ರಂದು ಘೋಷಿಸಿತು. ಈ ದಿನವೇ 'ವಿಶ್ವ ಛಾಯಾಗ್ರಹಣ ದಿನ'ವಾಗಿದೆಯೇ ಹೊರತು, ಕೆಲವರು ಅಂದುಕೊಳ್ಳುವಂತೆ ಕ್ಯಾಮರಾ ಕಂಡುಹಿಡಿದ ದಿನವೂ ಅಲ್ಲ, ಮೊಟ್ಟಮೊದಲ ಫೋಟೋ ಕ್ಲಿಕ್ಕಿಸಿದ ದಿನವೂ ಅಲ್ಲ.

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಿಕಾ ಛಾಯಾಗ್ರಾಹಕ,
ದಾವಣಗೆರೆ.

# ಪಕ್ಷ ಸಂಘಟನೆಯ ಹೊಣೆ ಬೊಮ್ಮಾಯಿ-ಕಟೀಲ್ ಹೆಗಲಿಗೆ

**(1ನೇ ಪುಟದಿಂದ)** ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾಧನೆಯನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗುತ್ತೇವೆ. ನೂರಾ ನಲವತ್ತೈದು ಸೀಟುಗಳನ್ನು ಗಳಿಸಿ ಅಧಿಕಾರಕ್ಕೆ ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ಸಂಘಟನೆಯನ್ನು ಬಲಗೊಳಿಸುವ ಕುರಿತು ಗಮನ ಕೇಂದ್ರೀಕರಿಸಲಾಗಿದ್ದು, ರಾಜ್ಯದ ಪ್ರತಿ ಬೂತ್‌ನಲ್ಲಿ ಕನಿಷ್ಟ ಐವತ್ತು ಮತಗಳನ್ನು ಗಳಿಸಬೇಕು ಎಂದು ಟಾರ್ಗೆಟ್ ನೀಡಲಾಗಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸೆಪ್ಟೆಂಬರ್ ಮೊದಲ ವಾರದಿಂದ ಅಕ್ಟೋಬರ್ ಮಧ್ಯ ಭಾಗದವರೆಗೆ ರಾಜ್ಯ ಪ್ರವಾಸ ಮಾಡಲಿದ್ದು, ಸರ್ಕಾರದ ಸಾಧನೆಗಳನ್ನು ಜನರಿಗೆ ವಿವರಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಪಕ್ಷದಲ್ಲಿ ಇನ್ನು ಮುಂದೆ ಅಶಿಸ್ತನ್ನು ಯಾವ ಕಾರಣಕ್ಕೂ ಸಹಿಸುವುದಿಲ್ಲ ಎಂದ ಅವರು, ಪಕ್ಷ ಮತ್ತು ಸರ್ಕಾರಕ್ಕೆ ಘಾಸಿಯುಂಟು ಮಾಡುವಂತೆ ಯಾರಾದರೂ ಹೇಳಿಕೆ ನೀಡಿದರೆ, ಅಂತವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಪದಾಧಿಕಾರಿಗಳು ತಮಗೆ ಸೂಚಿಸಿದ ಪ್ರದೇಶಗಳಲ್ಲಿ ಪ್ರವಾಸ ಮಾಡಬೇಕು.ಸಂಘಟನೆಯನ್ನು ಬಲಪಡಿಸಲು ದುಡಿಯಬೇಕು ಎಂದು ಸೂಚಿಸಲಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಿಜೆಪಿ ಸಂಸದೀಯ ಮಂಡಳಿಗೆ ನೇಮಕಗೊಂಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಅವರು, ಯಡಿಯೂರಪ್ಪ ಅವರು ಪಕ್ಷದ ಪರಮೋಚ್ಚ ಸಮಿತಿಗೆ ನೇಮಕಗೊಂಡಿರುವುದರಿಂದ ದಕ್ಷಿಣ ಭಾರತದಲ್ಲಿ ನಮಗೆ ಆನೆ ಬಲ ಬಂದಂತಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. ಇದು ಜನರಿಗೂ ಗೊತ್ತಿದೆ. ಹೀಗಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರು ನಮಗೇ ಆಶೀರ್ವಾದ ಮಾಡಲಿದ್ದಾರೆ ಎಂದು ಹೇಳಿದರು.

# ಗುಡ್ಡದ ಮೇಲೆ ಧ್ವಜಾರೋಹಣ



ದಾವಣಗೆರೆ, ಆ.18- ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ಹಿಮಾಲಯನ್ ಅಡ್ವೆಂಚರ್ ನೇಚರ್ ಅಕಾಡೆಮಿ ವತಿಯಿಂದ ಕೊಂಡಜ್ಜಿಯ ಏಳನೇ ಗುಡ್ಡಕ್ಕೆ ಚಾರಣ ಮಾಡುವುದರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಲಾಯಿತು. ರಾಜಶೇಖರ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎನ್. ಕೆ. ಕೊಟ್ರೇಶ್, ಶಶಿಕುಮಾರ್, ವೀರೇಶ್. ಕೊಟ್ರೇಶ್ ಗೌಡ, ಲಿಂಗರಾಜ್, ಪಶು ವೈದ್ಯಕೀಯ ಹಿರಿಯ ಸಹಾಯಕ ಜಿ.ಟಿ. ಮಲ್ಲಪ್ಪ, ಪ್ರಕೃತಿ, ನಾಗರಾಜ್, ಶಿವಕುಮಾರ್ ಇನ್ನು ಮುಂತಾದವರು ಭಾಗವಹಿಸಿದ್ದರು.

## ಕೃಷ್ಣಾರ್ಪಣಮಸ್ತು...

ನೀಲ ಮೇಘ ಶ್ಯಾಮ
ನಿನ್ನೊಡಲು ಪ್ರೀತಿಯ ಧಾಮ
ನಿನ್ನ ಪ್ರತಿ ನುಡಿ ನುಡಿಯಲ್ಲೂ ಧರ್ಮ
ಧನ್ಯವು ನಿನ್ನೊಲುಮೆಯಿಂದ ಮಾನವ ಜನ್ಮ

ನಿನ್ನುಸಿರು ತಾಕಿದ ಬಿದಿರು
ಮಧುರ ಮುರುಳಿಯಾಯಿತು
ನಿನ್ನ ಹಸ್ತ ಸೋಕಿ ಅಗುಳು ಅಕ್ಷಯವಾಯಿತು
ಬಿದ್ದ ನವಿಲುಗರಿಯೊಂದು ಮುಕುಟವಾಯಿತು
ಸ್ನೇಹವ ಪಡೆದ ಕುಚೇಲನು ಕುಬೇರನೇನಿಸಿದ

ಭೋದಿಸಿದ ಗೀತೆಯು ಭಗವದ್ಗೀತೆಯಾಯಿತು
ಜಗದ ಬಾಳಿಗೆ ಜ್ಯೋತಿಯಾಯ್ತು
ಪ್ರತಿ ತತ್ವವು ಸತ್ವವಾಯಿತು
ಮಾನವ ಕುಲಕೆ ನೀತಿಯಾಯಿತು

ನಿರೂಪಿಸುದೇನುತು ನವನೀತನು ನೀನು
ನಿನ್ನೊಲುಮೆಗೆ ಶರಣಾದ ನರನು ನಾನು
ಜಗವೆಲ್ಲ ಜಘ ಮಘಿಸಲು ಕಾರಣಕರ್ತ ನೀನು
ಎಲ್ಲವ ಆಡಿಸುವ ಅವಧೂತನು

**- ಬಸವರಾಜ. ಕರುವಿನ, ಬಸವನಾಳು**

# ಆಸ್ಪತ್ರೆಗಳಿಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

**(1ನೇ ಪುಟದಿಂದ)** ಸರಿಪಡಿಸಲು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಹನುಮನಾಯ್ಕ್ ಅವರಿಗೆ ಸೂಚನೆ ನೀಡಿದರು. ನಂತರ ಅಧಿಕಾರಿಗಳು ಶಿವಮೊಗ್ಗ ರಸ್ತೆಯ ಸಬ್ ರಿಜಿಸ್ಟರ್ ಕಚೇರಿಗೆ ಭೇಟಿ ನೀಡಿ ನೋಂದಣಿ, ಇ.ಸಿ., ವಿವಾಹ ನೋಂದಣಿ ಮತ್ತಿತರೆ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

200 ಇ.ಸಿ ಕೊಡದೇ ಇರುವುದನ್ನು ಗಮನಿಸಿದ ಲೋಕಾಯುಕ್ತ ಅಧಿಕಾರಿಗಳು, ಬೇಗನೆ ವಿತರಣೆ ಮಾಡಲು ತಿಳಿಸಿದರು.

ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕು. ಸರಿಯಾಗಿ ಕರ್ತವ್ಯ ನಿರ್ವಹಿಸುವ ಜೊತೆಗೆ ಕಚೇರಿಯ ಸಣ್ಣಪುಟ್ಟ ವ್ಯತ್ಯಾಸಗಳನ್ನು ಸರಿ ಪಡಿಸಬೇಕು ಎಂದು ಸಬ್ ರಿಜಿಸ್ಟರ್ ಅಧಿಕಾರಿಯಾದ ರಾಮಕೃಷ್ಣಪ್ಪ ಅವರಿಗೆ ಸೂಚನೆ ನೀಡಲಾಯಿತು.

ಈ ಸಂದರ್ಭದಲ್ಲಿ ಕೃಷ್ಣನಾಯ್ಕ್, ಹೆಚ್.ಎಸ್. ರಾಷ್ಟ್ರಪತಿ, ಸೈಪುಲ್ಲಾ, ಮಂಜುನಾಥ್, ಪರಮೇಶ್ವರಪ್ಪ ಮತ್ತಿತರರು ಹಾಜರಿದ್ದರು.

**ಸೈಟು ಮಾರಾಟಕ್ಕೆ (38 ಲಕ್ಷಕ್ಕೆ)**
ಹೋಟೆಲ್ ಸಾಯಿ ಇಂಟರ್‌ನ್ಯಾಷನಲ್ ಎದುರು, ಅಪೊಲೋ ಹಾಸ್ಪಿಟಲ್ ಕಾಂಪೌಂಡ್ ಹಿಂಭಾಗ, ಅಪ್ರೋಚ ಲೇಔಟ್‌ನಲ್ಲಿ 30x50 ಉತ್ತರ (ಅಪ್ರೂವಲ್)
ಬೂಸ್ನೂರ್ ಕಿರಣ್ (ಏಜೆಂಟ್)
98440 63409

**Commercial Space**
11x30 for Rent in Vidayanagar.
M : 98441 74555

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆಯಲ್ಲಿ 1ನೇ ಹಂತದಲ್ಲಿ 30x40 ಪೂರ್ವ 2ನೇ ಹಂತದಲ್ಲಿ 30x40 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ತಕ್ಷಣ ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಪುರುಷರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ.
98457 75768
88846 75884

**ಮನೆ ಸೇಲ್‌ಗೆ ಇದೆ**
(ವೈಟ್ ಮನಿಗೆ)
Doctor's ಕ್ಲಿನಿಕ್‌ಗೆ ತುಂಬಾ ಚೆನ್ನಾಗಿದೆ. 40x60 West, MCC 'B' Block ನಲ್ಲಿ
ಬೂಸ್ನೂರ್ ಕಿರಣ್ (ಏಜೆಂಟ್)
98440 63409
(Full White Money ಬೇಕು)

**Ready Tea Hotel for Rent in Vidayanagar.**
12*25 size.
M : 98441 74555

**ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ JH ಪಟೇಲ್ ಬಡಾವಣೆಯಲ್ಲಿ 50x80 North, 60x84 East, 40x84 East, 35x75 North, 20x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗಿದೆ**
ದಾವಣಗೆರೆ ಅಖ್ತರ್ ರಜಾ ಸರ್ಕಲ್, ರಿಂಗ್ ರಸ್ತೆಗೆ ಲಗತ್ತಾಗಿರುವ ಡ್ರೀಮ್ ಮಾರ್ಟ್ ವಾಣಿಜ್ಯ ಮಳಿಗೆ ಎರಡನೇ ಅಂತಸ್ತಿನಲ್ಲಿ 3500 ಚದರ ಅಡಿಯುಳ್ಳ ಸ್ಥಳ ಕಛೇರಿ ಉಪಯೋಗಕ್ಕೆ ಬಾಡಿಗೆಗಿದೆ.
9738537517

**ಮನೆ, ಕಾಂಪ್ಲೆಕ್ಸ್ ಮಾರಾಟಕ್ಕೆ ಇದೆ**
ಬಾಲಾಜಿ ಬಡಾವಣೆಯಲ್ಲಿ 30x50 ಕಾರ್ನರ್ ಸೈಟ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಫಸ್ಟ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಮಾರಾಟಕ್ಕೆ ಇದೆ.
98448 82366

**ಬೇಕಾಗಿದ್ದಾರೆ**
BA, B.Ed - 1 Post (Ladies Only) (ಸಮಾಜ ವಿಜ್ಞಾನ ಶಿಕ್ಷಕಿ)
ಶ್ರೀ ರಾಘವೇಂದ್ರ ಪ್ರೌಢ ಶಾಲೆ ನಿಟುವಳ್ಳಿ ದಾವಣಗೆರೆ
90359 16750
95358 85997

**ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಸಂಪರ್ಕಿಸಿರಿ :
94489 29509

**ಟೆಂಡರ್ ತಿದ್ದುಪಡಿ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಬಾಡ, ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಸಲ್ಲಿಸಲು ದಿನಾಂಕ 15.7.2022ರಿಂದ 16.8.2022 ರ ಸಂಜೆ 4.30 ರವರೆಗೆ ಸಮಯ ನಿಗದಿಪಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರನ್ನು ದಿನಾಂಕ 20.8.2022ರ ಸಂಜೆ 4.30ರವರೆಗೆ ಮುಂದೂಡಲಾಗಿದೆ. ಉಳಿದ ಟೆಂಡರ್ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಆಹಾರ ಖರೀದಿಸಿ ಹಣ ಗಳಿಸಿ**
ಕೇವಲ 8100 ರೂ ಗಳ ಆಹಾರದ ಉತ್ಪನ್ನಗಳನ್ನು ಬಳಸಿರಿ ಪಡೆಯಿರಿ 8,85,720 /- ರೂ ಕ್ಯಾಷ್ ಬ್ಯಾಕ್ (ಟಿ&ಸಿ)
No-Joining, No-BV, PV
AUTO FILL COMPANY
86602 35013

**ಬಾಡಿಗೆಗೆ**
ಪಿಜೆ ಎಕ್ಸ್‌ಟೆನ್ಷನ್‌ನಲ್ಲಿ 6000 Sqft PB Roadನಲ್ಲಿ 3400x4 = 13600 Sqft B+G+2 floors ಬಿಲ್ಡಿಂಗ್‌ಗಳು ಬಾಡಿಗೆಗಿವೆ.
94480 28103
Suitable for Hospitals, Offices

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ
ಸಂಬಳ : 10,000 /-
ಸಂಪರ್ಕಿಸಿ:
99161 43003
99012 36525

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಬೇಕಾಗಿದ್ದಾರೆ**
ಮೈಸೂರಿನ ಪ್ರತಿಷ್ಠಿತ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ವಯೋಮಿತಿ : 18 ರಿಂದ 40 ವರ್ಷ, ವಿದ್ಯಾಭ್ಯಾಸ : SSLC/PUC/ITI/Diploma/ Degree ಸಂಬಳ ; 13,000-18,000 ESI, PF ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : 96065 46647
(ಯಾವುದೇ ರೀತಿಯ ಶುಲ್ಕವಿರುವುದಿಲ್ಲ)

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**ಮನೆ ಮಾರಾಟಕ್ಕೆ ಇದೆ**
ನಂ. 731, ನಂ. 732 (1000 SQFT Each) ಎಸ್.ಪಿ.ಎಸ್. ನಗರ, 1ನೇ ಹಂತ, ಎ ಬ್ಲಾಕ್, ರಿಂಗ್ ರೋಡ್ ಪಕ್ಕ ದಾವಣಗೆರೆ.
(For Commercial Purpose)
99801 34792,
78924 05893

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಟೈರ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ITI / Diploma (Mech)
ಸಂಬಳ : 12,000 /-
99161 43003

**ಮನೆ ಬಾಡಿಗೆಗೆ ಇದೆ**
ಸರಸ್ವತಿ ಬಡಾವಣೆ ವಿದ್ಯಾನಂದನ ಸ್ಕೂಲ್ ಹಿಂಭಾಗ 3ನೇ ರಸ್ತೆಯಲ್ಲಿ ಶ್ರೀ ಕೃಷ್ಣ ಬಿಲ್ಡಿಂಗ್‌ನಲ್ಲಿ ಮೊದಲನೇ ಅಂತಸ್ತಿನಲ್ಲಿ ಡಬಲ್ ರೂಂ ಉಳ್ಳ ಮನೆ ಬಾಡಿಗೆಗೆ ಇದೆ. ನೀರಿನ ವ್ಯವಸ್ಥೆ ಇದೆ. ಸಂಪರ್ಕಿಸಿ:
94481 14320

**ವಾಟರ್ ಟ್ಯಾಂಕ್ ಕ್ಲೀನಿಂಗ್, ಸಂಪು, ಸಿಂಟ್ಯಾಂಕ್ಸ್ ಕ್ಲೀನಿಂಗ್, ಸೈಟ್, ಪಾರ್ಕ್ ಕ್ಲೀನಿಂಗ್ ಮಾಡಿಕೊಡಲಾಗುವುದು.**
91108 54112

**ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ**
ಜಯನಗರ ಎ ಬ್ಲಾಕ್ ನಲ್ಲಿ ಫರ್ನಿಚರ್ ಸೌಲಭ್ಯ ವುಳ್ಳ ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.
ಮೊ: 94484 39639

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
ಫೋ :96864 62502

**ಕೆಲಸಕ್ಕೆ ಬೇಕಾಗಿದ್ದಾರೆ**
J.P. ENTERPRISES
(Diagnostics & Surgicals House)
Any degree with basic computer knowledge
Contact : 97422 64091
Languages known English, Hindi, Kannada

**ಸೈಟು ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಶಿವಗಂಗ ಕಲ್ಯಾಣ ಮಂಟಪದ ಹಿಂಭಾಗ, 40 ಅಡಿ ರೋಡ್‌ಗೆ 41x92 ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕೆ ಇದೆ.
98448 82366

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷಂಟ್ ಕೇರ್ ನರ್ಸಿಂಗ್ -2 ವರ್ಷ
NTC : ನರ್ಸರಿ ಟೀಚರ್ಸ್ ಟ್ರೈನಿಂಗ್
ನೇರ ಪರೀಕ್ಷೆಗಳು
SSLC, PUC, BA, B.Com, MBA
ಶ್ರೀ ಗಂಗೋತ್ರಿ ಕಾಲೇಜ್
ಲಾಯರ್ ರೋಡ್ ದಾವಣಗೆರೆ.
8660235013

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ GST ಅನುಭವವುಳ್ಳ ಅಕೌಂಟೆಂಟ್ ಬೇಕಾಗಿದ್ದಾರೆ.
62628 62622, 87929 20707

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ADMISSION OPEN 2022
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸೈಟ್‌ಗಳು ಮಾರಾಟಕ್ಕಿವೆ**
ಪೈಲ್ವಾನ್ ಚನ್ನಬಸಪ್ಪ ಲೇಔಟ್ ಹಿಂಭಾಗ 40 ಅಡಿ ರಸ್ತೆಗೆ 33x64 ದಕ್ಷಿಣ, ನಂದಿನಿ ಲೇಔಟ್ ಪಕ್ಕ 30x40 ದಕ್ಷಿಣ, 30x50 ಪೂರ್ವ, 30x59 ಪೂರ್ವ ಸಂಪರ್ಕಿಸಿ:
ಮೊ: 93439 98999
ಗಣೇಶ್: 98805 03004

**WANTED**
Commerce Faculty for Tuitions. Salary is based on their experience.
SAMRUDDHI COACHING ACADEMY
63646 40296, 96202 62361

**HAIRPOINT SALON**
BEAUTY & HAIR LOUNGE
Designation : Receptionist (only females)
qualificatin : SSLC/PUC, Salary : 8,000 to 12,000 and also wanted house keeper salary 6000 to 7000, age limit 20-28 years
MCC B block, 7th main, 3rd cross
97386 64400, 91483 19342

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಅಡುಗೆ ಮಾಡಲು ಭಟ್ಟರು ಹಾಗೂ ಸಹಾಯಕರು ಬೇಕಾಗಿದ್ದಾರೆ.
(ಸಸ್ಯಹಾರಿ ಹಾಗೂ ಮಾಂಸಹಾರಿ)
ಸ್ಥಳ : ಚೆನ್ನಮ್ಮ ಸರ್ಕಲ್ ಹತ್ತಿರ, ಹುಬ್ಬಳ್ಳಿ.
74832 29878, 89710 23517

# ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆತ

## ದುಡ್ಡು ಕೊಟ್ಟು ಬಿಜೆಪಿ ದಾಳಿ ನಡೆಸಿದೆ ಎಂದ ಕಾಂಗ್ರೆಸ್ ನಾಯಕ

ಮಡಿಕೇರಿ, ಆ. 18 – ನೆರೆ ಪೀಡಿತ ಪ್ರದೇಶಗಳ ಪರಿಶೀಲನೆಗಾಗಿ ಕೊಡಗಿಗೆ ಬಂದಿದ್ದ ಕಾಂಗ್ರೆಸ್ ನಾಯಕ ಹಾಗೂ ವಿಧಾನಸಭೆಯಲ್ಲಿ ಪ್ರತಿಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರ ವಿರುದ್ಧ ಕಪ್ಪು ಬಾವುಟದ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಅವರ ಕಾರಿಗೆ ಮೊಟ್ಟೆ ಎಸೆದ ಘಟನೆ ನಡೆದಿದೆ.

ಸಿದ್ದರಾಮಯ್ಯ ಅವರು ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತಕ್ಕೆ ಬಂದ ಸಮಯದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಇದು ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆಗೂ ಕಾರಣವಾಗಿದೆ.

ಪ್ರತಿಭಟನಾಕಾರರು ವಿ.ಡಿ. ಸಾವರ್ಕರ್ ಚಿತ್ರಗಳನ್ನೂ ಹಿಡಿದಿದ್ದರು. ಪ್ರತಿಭಟನಾಕಾರರೊಬ್ಬರು ಎಸೆದ ಸಾವರ್ಕರ್ ಚಿತ್ರವು ವಾಹನದಲ್ಲಿದ್ದ ಸಿದ್ದರಾಮಯ್ಯ ಅವರ ತೊಡೆ ಮೇಲೆ ಬಿತ್ತು.

ಮುಸ್ಲಿಮರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಸಾವರ್ಕರ್ ಫ್ಲೆಕ್ಸ್ ಏಕೆ ಹಾಕಬೇಕು? ಎಂದು ಸಿದ್ದರಾಮಯ್ಯ ಇತ್ತೀಚೆಗೆ ಹೇಳಿದ್ದು ವಿವಾದಕ್ಕೆ ಕಾರಣವಾಗಿತ್ತು. ಶಿವಮೊಗ್ಗದಲ್ಲಿ ಸಾವರ್ಕರ್ ಫ್ಲೆಕ್ಸ್ ಹಾಕುವುದಕ್ಕೆ ಸಂಬಂಧಿಸಿದಂತೆ ಘರ್ಷಣೆ ಉಂಟಾದ ನಂತರ ಸಿದ್ದರಾಮಯ್ಯ ಈ ಹೇಳಿಕೆ ನೀಡಿದ್ದರು.

**ಪ್ರತಿಭಟಿಸಿದವರು ಹೇಡಿಗಳು :** ಬಿಜೆಪಿ ಪ್ರತಿಭಟನೆಯನ್ನು ತರಾಟೆಗೆ ತೆಗೆದುಕೊಂಡಿರುವ ಸಿದ್ದರಾಮಯ್ಯ, ಇದು ಹೇಡಿಗಳು ಮಾಡುತ್ತಿರುವ ಪ್ರತಿಭಟನೆ ಎಂದಿದ್ದಾರೆ.

ಕೊಡಗಿನ ಎಲ್ಲಾ ಕಡೆ ಬಿಜೆಪಿಯವರು ಕಳಪೆ ಕಾಮಗಾರಿ ಮಾಡಿದ್ದರಿಂದ ಈ ಸಮಸ್ಯೆ ಆಗಿದೆ. ಇದನ್ನು ನೋಡಲು ಬಿಡಬಾರದು ಎಂದು ಬಿಜೆಪಿ ದುಡ್ಡು ಕೊಟ್ಟು ಜನರನ್ನು ಕರೆತಂದು ಪ್ರತಿಭಟಿಸಿದೆ ಎಂದಿದ್ದಾರೆ.

ನಮ್ಮ ಕಾರ್ಯಕರ್ತರು ಮನಸ್ಸು ಮಾಡಿದರೆ ಕೊಡಗಿನಲ್ಲಿ ಬಿಜೆಪಿಯ ಯಾವ ಸಚಿವರೂ ಕೂಡ ಓಡಾಡುವುದಕ್ಕೆ ಬಿಡಲ್ಲ. ಆದರೆ, ಅದು ನಮ್ಮ ಸಂಸ್ಕೃತಿ ಅಲ್ಲ. ಬಿಜೆಪಿಯವರನ್ನು ಜನರೇ ಸೋಲಿಸಲಿದ್ದಾರೆ ಎಂದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಕಿಡಿ ಕಾರಿರುವ ಸಿದ್ದರಾಮಯ್ಯ, ಮೊಟ್ಟೆ ಎಸೆಯುವ ಗೂಂಡಾಗಿರಿಯ ರಾಜಕೀಯ ಶುರು ಮಾಡಬೇಡಿ. ಅದನ್ನು ಅಂತ್ಯ ಮಾಡುವುದು ಹೇಗೆ ಎಂದು ನಮಗೂ ಗೊತ್ತು. ನಮ್ಮ ಕಾರ್ಯಕರ್ತರು ನಿಮ್ಮವರಂತೆಯೇ ಬೀದಿಗಿಳಿದರೆ ನೀವು ಮನೆಯಿಂದ ಹೊರ ಬರುವುದು ಕಷ್ಟವಾಗಬಹುದು ಎಂದು ಎಚ್ಚರಿಸಿದ್ದಾರೆ.

# ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆತ ಪ್ರಯತ್ನಕ್ಕೆ ಖಂಡನೆ



ಜಿಲ್ಲಾ ಕಾಂಗ್ರೆಸ್, ಸಿದ್ದರಾಮಯ್ಯ ಅಭಿಮಾನಿಗಳ ಪ್ರತಿಭಟನೆ

ದಾವಣಗೆರೆ, ಆ.18- ಕೊಡಗಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆಯುವ ಪ್ರಯತ್ನ ವಿರೋಧಿಸಿ ಜಿಲ್ಲಾ ಕಾಂಗ್ರೆಸ್‌ನಿಂದ ನಗರದಲ್ಲಿ ಇಂದು ಸಂಜೆ ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯರ ಅಭಿಮಾನಿಗಳು ಟೈರ್‌ಗಳಿಗೆ ಬೆಂಕಿ ಹಚ್ಚಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಬಿಜೆಪಿ ಕಾರ್ಯಕರ್ತರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯರ ಕಾರಿನ ಮೇಲೆ ಮೊಟ್ಟೆ ಎಸೆಯಲು ಬಿಜೆಪಿಯವರಿಗಷ್ಟೇ ಅಲ್ಲ, ನಮಗೂ ಬರುತ್ತೆ. ನಾವು ಸಹ ಮೊಟ್ಟೆ ಸೇರಿದಂತೆ ಬೇರೆ ಬೇರೆ ವಸ್ತುಗಳನ್ನು ಬಿಜೆಪಿ ನಾಯಕರ ಮೇಲೆ ಎಸೆಯಬೇಕಾಗುತ್ತದೆ. ಸಚಿವರು ಬಂದಾಗ ನಾವೂ ಸಹ ಪ್ರತಿಭಟನೆ ನಡೆಸಬೇಕಾಗುತ್ತದೆ. ಬಿಜೆಪಿ ಭ್ರಷ್ಟ ಸರ್ಕಾರವಾಗಿದೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಕಿಡಿಕಾರಿದರು.

ದಾವಣಗೆರೆಯಲ್ಲಿ ಇತ್ತೀಚೆಗೆ ಸಿದ್ಧರಾಮಯ್ಯ ಅವರ ಜನ್ಮ ದಿನದ ಅಮೃತ ಮಹೋತ್ಸವದಂದು ಜನಸಾಗರವೇ ಸೇರಿತ್ತು. ಇದರಿಂದ ಬಿಜೆಪಿಗೆ ನಡುಕ ಉಂಟಾಗಿದ್ದು, ಇದಕ್ಕಾಗಿಯೇ ಕೋಮು ಗಲಭೆ ಎಬ್ಬಿಸುವ, ಗೂಂಡಾಗಳನ್ನು ಬಿಟ್ಟು ಗಲಾಟೆ ಎಬ್ಬಿಸುವಂತಹ ಕೆಲಸ ಮಾಡುತ್ತಿದೆ. ಇದೇ ರೀತಿ ಮುಂದಿನ ದಿನಗಳಲ್ಲಿ ದುರ್ವರ್ತನೆ ಮುಂದುವರೆಸುವ ಪ್ರಯತ್ನಗಳು ನಡೆದರೆ ದಾವಣಗೆರೆ ಜಿಲ್ಲೆಗೆ ಬಿಜೆಪಿಯ ಯಾವುದೇ ನಾಯಕರಾಗಲೀ, ಅಥವಾ ಆ ಪಕ್ಷದ ಮುಖ್ಯಮಂತ್ರಿಗಳು ಬಂದರೂ ಪ್ರತಿಭಟನೆಗಿಳಿಯುತ್ತೇವೆ ಎಂದು ಜಿಲ್ಲಾ ಕಾಂಗ್ರೆಸ್ ಹಿರಿಯ ಮುಖಂಡ ಬಿ. ವೀರಣ್ಣ ಎಚ್ಚರಿಸಿದರು.

ಕಾಂಗ್ರೆಸ್ ಕಾರ್ಯಕರ್ತರು ದಂಗೆ ಎದ್ದರೆ ಸಿಎಂ ಬಸವರಾಜ ಬೊಮ್ಮಾಯಿ ಅವರೇ ಹೊಣೆಗಾರರಾಗುತ್ತಾರೆ ಎಂದು ಕುರುಬ ಸಮಯದಾಯದ ಮುಖಂಡ ಪಿ. ರಾಜಕುಮಾರ್ ಆಗ್ರಹಿಸಿದರು.

ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತೆ. ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯರ 75ನೇ ವರ್ಷದ ಅಮೃತ ಮಹೋತ್ಸವದ ಯಶಸ್ಸು ಕಂಡು ಬಿಜೆಪಿಗೆ ಭ್ರಮನಿರಸನವಾಗಿದೆ ಎಂದು ಕಾಂಗ್ರೆಸ್ ಮುಖಂಡ ಎಸ್. ಮಲ್ಲಿಕಾರ್ಜುನ್ ಹೇಳಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರಾದ ಕೆ.ಎಸ್. ಬಸವಂತಪ್ಪ, ಎ. ನಾಗರಾಜ್, ನಿಟುವಳ್ಳಿ ಗುರುರಾಜ್, ಮೊಹ್ಮದ್ ಜಿಕ್ರಿಯಾ, ಕೆ.ಎಲ್. ಹರೀಶ್ ಬಸಾಪುರ, ಟಿ. ಯುವರಾಜ್, ಬಾತಿ ಶಿವಕುಮಾರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಮಾರಾಟ ಕೇಂದ್ರವಾದ ಹೈಸ್ಕೂಲ್ ಕ್ರೀಡಾ ಮೈದಾನ : ಖಂಡನೆ



ದಾವಣಗೆರೆ, ಆ. 18- ಕ್ರೀಡಾಪಟುಗಳಿಗೆ ಮೀಸಲಾಗಿದ್ದ ಸರ್ಕಾರಿ ಪ್ರೌಢಶಾಲಾ ಮೈದಾನವು ಶಾಲಾ ಮೇಲುಸ್ತುವಾರಿಯ ವ್ಯಾಪಕ ಭ್ರಷ್ಟಾಚಾರ ಮತ್ತು ನಿರ್ಲಕ್ಷ್ಯದಿಂದಾಗಿ ಇಂದು ಮಾರಾಟ ಕೇಂದ್ರವಾಗಿ ಮಾರ್ಪಾಡಾಗಿದೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಆರೋಪಿಸಿದ್ದಾರೆ.

ಈಗಾಗಲೇ ಕ್ರೀಡಾಪಟುಗಳಿಗೆ ಮೀಸಲಾಗಿದ್ದ ಸರ್ಕಾರಿ ಪ್ರೌಢಶಾಲಾ ಮೈದಾನವನ್ನು ಸರ್ಕಾರಿ ಮತ್ತು ಖಾಸಗಿ ಬಸ್ ನಿಲ್ದಾಣಕ್ಕೆ ನೀಡಲಾಗಿದ್ದು, ಇದೀಗ ಮತ್ತೊಂದು ಬದಿ ಗೃಹಶೋಭೆ ಹೆಸರಿನಲ್ಲಿ ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸಲಾಗುತ್ತಿದ್ದು, ಇದರಿಂದ ಹೈಸ್ಕೂಲ್ ಮೈದಾನದಲ್ಲಿ ಕ್ರೀಡಾಪಟುಗಳಿಗೆ ಅವಕಾಶ ಇಲ್ಲದಂತಾಗಿ, ಮಾರಾಟ ಕೇಂದ್ರವಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರಿ ಪ್ರೌಢಶಾಲಾ ಮೈದಾನವು ಕ್ರೀಡಾಪಟುಗಳಿಗೆ ಮೀಸಲು ಎಂಬುದು ಕೇವಲ ಹೇಳಿಕೆ ಆಗಿಯೇ ಉಳಿದಿದ್ದು, ಶಾಲಾ ಮೇಲುಸ್ತುವಾರಿಯ ಧನದಾಹದಿಂದಾಗಿ ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸಲು ಅವಕಾಶ ನೀಡುತ್ತಿದ್ದು, ಇದರಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎನ್ನಲಾಗಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದ್ದಾರೆ. ಹೈಸ್ಕೂಲ್ ಮೈದಾನದಲ್ಲಿ ಕನಿಷ್ಠ ಪಕ್ಷ 80ರಷ್ಟು ಜಾಗವನ್ನು ಕ್ರೀಡಾಪಟುಗಳಿಗೆ ಮೀಸಲಿಡಬೇಕೆಂದು ಆಗ್ರಹಿಸಿರುವ ಅವರು, ಜಿಲ್ಲಾಧಿಕಾರಿಗಳು ಈ ಕೂಡಲೇ ಮಧ್ಯೆ ಪ್ರವೇಶಿಸಿ ಖಾಸಗಿಯವರಿಗೆ ಮಳಿಗೆಗಳನ್ನು ನಿರ್ಮಿಸಲು ಅವಕಾಶ ನೀಡದಂತೆ ನಿರ್ಬಂಧ ವಿಧಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

## ಇಂದು ಫೋಟೋ ಮತ್ತು ವಿಡಿಯೋ ಗ್ರಾಫರ್ಸ್ ಸಂಘದ ವಾರ್ಷಿಕೋತ್ಸವ

ದಾವಣಗೆರೆ, ಆ.18- ತಾಲ್ಲೂಕು ಫೋಟೋ ಮತ್ತು ವೀಡಿಯೋಗ್ರಾಫರ್ಸ್ ಸಂಘದ 10ನೇ ವಾರ್ಷಿಕೋತ್ಸವ, 183ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಪ್ರಯುಕ್ತ ವೀರ ಯೋಧರು, ಹಿರಿಯ ಛಾಯಾಗ್ರಾಹಕರು ಹಾಗೂ ಛಾಯಾಗ್ರಾಹಕ ವೃತ್ತಿಯಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಹಾಗೂ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಎಂ.ಮನು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 19ರಂದು ನಗರದ ರೋಟರಿ ಬಾಲಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಯೋಧರು ಹಾಗೂ ಛಾಯಾಗ್ರಾಹಕರನ್ನು ಸನ್ಮಾನಿಸಲಿದ್ದಾರೆ. ಎಸ್ಪಿ ಸಿ.ಬಿ.ರಿಷ್ಯಂತ್ ಅವರು ಪ್ರಶಸ್ತಿ ವಿತರಣೆ ಮಾಡುವರು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಂಘದ ಗೌರವ ಅಧ್ಯಕ್ಷ ಬಿ.ಮಂಜುನಾಥ್, ವಿಶೇಷ ಆಹ್ವಾನಿತರಾಗಿ ಹೆಚ್.ಬಿ. ಮಂಜುನಾಥ್, ಜೆ.ಎನ್. ಶ್ರೀನಿವಾಸ್ ಆಗಮಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಜಿ.ಮಂಜುನಾಥ್, ಅಮೃತ್ ಕಿರಣ್, ಕೆ.ದೇವೇಂದ್ರಪ್ಪ (ಕುಮಾರ್), ಮಲ್ಲೇಶ್ ಹೆಚ್.ಪಾಟೀಲ್ ಇತರರು ಉಪಸ್ಥಿತರಿದ್ದರು.

## ಆನಕೊಂಡದಲ್ಲಿ 22ಕ್ಕೆ ಕಾರಣಿಕೋತ್ಸವ

ದಾವಣಗೆರೆ, ಆ. 18 - ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 22ರಂದು ಶ್ರಾವಣ ಮಾಸದ ಕಡೆಯ ಸೋಮವಾರ ಸಂಜೆ 6 ಗಂಟೆಗೆ ಕಾರ್ಣಿಕ ಮತ್ತು ಜಾತ್ರಾ ಮಹೋತ್ಸವ ಜರುಗಲಿದೆ.

ಅಂದು ಸಂಜೆ 4 ಗಂಟೆಗೆ ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ಹಾಗೂ ನಿಟುವಳ್ಳಿ ದುರ್ಗಾಂಬಿಕಾ ದೇವಿ ಹಾಗೂ ಸುತ್ತ-ಮುತ್ತಲಿನ ದೇವರುಗಳೊಂದಿಗೆ ಮೆರವಣಿಗೆ ನಡೆಯಲಿದೆ ಎಂದು ಶ್ರೀ ಬಸವೇಶ್ವರ ಮುಜರಾಯಿ ಸಮಿತಿ ತಿಳಿಸಿದೆ.

# ನಗರದಲ್ಲಿ ನಾಳೆ ಶ್ರೀ ಅನ್ನದಾನಿ ಶಿವಯೋಗಿಗಳ ಪುಣ್ಯಾರಾಧನೆ, ನೂತನ ಶ್ರೀಗಳ ಪುರಪ್ರವೇಶ

ದಾವಣಗೆರೆ, ಆ. 18- ಶ್ರೀ ಗುರು ಅನ್ನದಾನ ಮಹಾಶಿವಯೋಗಿಗಳವರ 45ನೇ ಪುಣ್ಯಾರಾಧನೆ, ಲಿಂ.ಡಾ.ಅಭಿನವ ಅನ್ನದಾನ ಮಹಾಸ್ವಾಮಿಗಳವರ ಪ್ರಥಮ ವರ್ಷದ ಪುಣ್ಯಾರಾಧನೆ, ನೂತನ ಜಗದ್ಗುರುಗಳಾದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಅವರ ಪುರಪ್ರವೇಶ, 249ನೇ ಶಿವಾನುಭವ ಸಂಪದ, 501 ಮುತ್ತೈದೆ ಯರಿಗೆ ಉಡಿ ತುಂಬುವ ಕಾರ್ಯಕ್ರಮವು ನಾಡಿದ್ದು ದಿನಾಂಕ 20 ಹಾಗೂ 21ರಂದು ನಡೆಯಲಿದೆ.

ನಗರದ ಶ್ರೀ ಅನ್ನದಾನೀಶ್ವರ ಶಾಖಾಮಠದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀ ಅನ್ನ ದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್‌ನ ಅಧ್ಯಕ್ಷ ಅಥಣಿ ಎಸ್.ವೀರಣ್ಣ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ದಿನಾಂಕ 20 ರಂದು ಸಂಜೆ 4 ಗಂಟೆಗೆ ನೂತನ ಜಗದ್ಗುರುಗಳ ಪುರ ಪ್ರವೇಶವು ಲಿಂ.ಶ್ರೀ ಅಥಣಿ ಕೊಟ್ರಪ್ಪ ಮಹಾದ್ವಾರದಿಂದ ನಡೆಯಲಿದೆ.

ದಿನಾಂಕ 21ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಉಭಯ ಜಗದ್ಗುರುಗಳ ಪುಣ್ಯಸ್ಮರಣೆ, ಶಿವಾನುಭವ ಸಂಪದ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ಹಾಲಕೆರೆ ಶ್ರೀ ಅನ್ನದಾನೀಶ್ವರ ಸಂಸ್ಥಾನ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಆಗಮಿಸಲಿದ್ದಾರೆ. ಎಫ್.ಎನ್. ಹುಡೇದ್ ಉಪನ್ಯಾಸ ನೀಡಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎನ್. ಅಡಿವೆಪ್ಪ, ಅಮರಯ್ಯ ಗುರುವಿನಮಠ, ನಾಗರಾಜ್, ವೀರಪ್ಪ ಎಂ.ಬಾವಿ, ಶಿವಪುತ್ರ ಸಿಂಗಾಡಿ ಉಪಸ್ಥಿತರಿದ್ದರು.

## ಇಂದು ರೇಣುಕಾ ಯಲ್ಲಮ್ಮ ದೇವಿ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ

ಲೋಕಿಕೆರೆ ರಸ್ತೆಯ ಕೈಗರಿಕಾ ಪ್ರದೇಶದ ಮಹಾತ್ಮ ಬಸವ, ಬುದ್ಧ, ಭೀಮ ನಗರದಲ್ಲಿನ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಇಂದು ಮಧ್ಯಾಹ್ನ 12.30 ಕ್ಕೆ ಶ್ರೀ ರೇಣುಕಾ ಯಲ್ಲಮ್ಮ ದೇವಿ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಕರೇಗಲ್ಲು ಪ್ರತಿಷ್ಠಾಪನೆ ಸಮಾರಂಭ ನಡೆಯಲಿದೆ.

ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಸದ ಡಾ.ಜಿ.ಎಂ. ಸಿದ್ದೇಶ್ವರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಯಶವಂತರಾವ್ ಜಾಧವ್, ಲೋಕಿಕೆರೆ ನಾಗರಾಜ್, ಜಯಮ್ಮ ಗೋಪಿನಾಥ್, ಗಾಯತ್ರಿಬಾಯಿ ಖಂಡೋಜಿರಾವ್, ಗೀತಾ ನಾಗರಾಜ್, ನಾಗರಾಜ್ ಪಾಮೇನಹಳ್ಳಿ, ಬಿ.ಸಿ. ಆನಂದ್, ಎಸ್.ಟಿ. ವೀರೇಶ್, ಬಿ.ಜೆ. ಅಜಯ್ ಕುಮಾರ್, ಟಿ. ಬಸವರಾಜ್, ರವಿರಾಜ್, ಶ್ರೀಧರ್ ಪಾಟೀಲ್ ಮತ್ತಿತರರು ಭಾಗವಹಿಸಲಿದ್ದಾರೆ.

## 21 ರಂದು ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

ದಾವಣಗೆರೆ, ಆ.18- ನಗರದ ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ನಿಯಮಿತದ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 21 ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಶರಣ ಮಾಗನೂರು ಬಸಪ್ಪ ಸಭಾಭವನದಲ್ಲಿ ನಡೆಯುವುದು. ಸಂಘದ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಅಧ್ಯಕ್ಷತೆ ವಹಿಸುವರು.

## ಭದ್ರಾ ಜಲಾಶಯಕ್ಕೆ ಇಂದು ಬಾಗಿನ

ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಇಂದು ಬೆಳಿಗ್ಗೆ 11.30ಕ್ಕೆ ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ವತಿಯಿಂದ ಬಾಗಿನ ಅರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರಡ್ಡಿ ತಿಳಿಸಿದ್ದಾರೆ.

## ಹಳೇಬಾತಿಯಲ್ಲಿ ಇಂದು ಮಹಾದ್ವಾರ ನಿರ್ಮಾಣಕ್ಕೆ ಕಾಮಗಾರಿ ಶಂಕುಸ್ಥಾಪನೆ

ದಾವಣಗೆರೆ ತಾಲ್ಲೂಕಿನ ಹಳೇಬಾತಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮಹಾದ್ವಾರ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನಾ ಸಮಾರಂಭ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ (ಭೈರತಿ) ಶಂಕುಸ್ಥಾಪನೆ ನೆರವೇರಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವೆ ಶಶಿಕಲಾ ಜೊಲ್ಲೆ, ಜಿ.ಎಂ. ಸಿದ್ದೇಶ್ವರ, ಶಾಮನೂರು ಶಿವಶಂಕರಪ್ಪ, ಎಸ್. ರಾಮಪ್ಪ, ಎಂ.ಪಿ. ರೇಣುಕಾಚಾರ್ಯ, ಕೆ. ಮಾಡಾಳ್ ವಿರೂಪಾಕ್ಷಪ್ಪ, ಪ್ರೊ. ಲಿಂಗಣ್ಣ, ಎಸ್.ವಿ. ರಾಮಚಂದ್ರ, ಜಿ. ಕರುಣಾಕರ ರೆಡ್ಡಿ, ಆಯನೂರು ಮಂಜುನಾಥ್, ಎನ್. ನವೀನ್, ಕೆ. ಅಬ್ದುಲ್ ಜಬ್ಬಾರ್, ಶಾಮನೂರು ಮಲ್ಲಿಕಾರ್ಜುನ್, ಹೆಚ್.ಎಸ್. ಶಿವಶಂಕರ್, ಬಿ.ಪಿ.ಹರೀಶ್, ಶಿವಾನಂದ ಕಪಾಸಿ, ಮಹಾಂತೇಶ್ ಬೀಳಗಿ, ಎನ್. ದುರ್ಗಾಶ್ರೀ, ಬಸವನಗೌಡ ಕೋಟೂರು, ಹಳೇಬಾತಿ ಗ್ರಾ.ಪಂ. ಅಧ್ಯಕ್ಷ ಬಿ.ಪಿ. ಕೆಂಚಪ್ಪ, ಉಪಾಧ್ಯಕ್ಷೆ ಗದಿಗೆಮ್ಮ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಚೀಟಿ ನಿಧಿಗಳ ದಿನಾಚರಣೆ

ಕರ್ನಾಟಕ ಸರ್ಕಾರದ ಸಹಕಾರ ಇಲಾಖೆ ಸಹಯೋಗದಲ್ಲಿ ದಾವಣಗೆರೆ ಜಿಲ್ಲಾ ಚಿಟ್‌ಫಂಡ್ಸ್ ಸಂಘದ ವತಿಯಿಂದ ಚೀಟಿ ನಿಧಿಗಳ ದಿನಾಚರಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ. ಸಹಕಾರ ಇಲಾಖೆಯ ಚೀಟಿ ನಿಧಿಗಳ ಅಧಿಕಾರಿಗಳ ಉಪಸ್ಥಿತಿಯಲ್ಲಿ ಚೀಟಿ ನಿಧಿಗಳ ಉಪನಿಬಂಧಕರಾದ ಹೆಚ್. ಅನ್ನಪೂರ್ಣಮ್ಮ, ಸಹಾಯಕ ನಿಬಂಧಕರಾದ ಹೆಚ್.ಎಸ್. ಸತೀಶ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚೀಟಿ ನಿಧಿಗಳ ಲೆಕ್ಕಪತ್ರ ಮತ್ತು ಜಿಎಸ್‌ಟಿ ನಿರ್ವಹಣೆ ಕುರಿತು ಲೆಕ್ಕಪರಿಶೋಧಕ ಜಂಬಗಿ ರಾಧೇಶ್, ಚೀಟಿ ನಿಧಿಗಳ ಬಾಕಿ ವಸೂಲಾತಿಗೆ ಬೇಕಾಗುವ ದಾಖಲಾತಿಗಳ ವಿಷಯ ಕುರಿತು ವಕೀಲರಾದ ಎ.ಎಸ್. ಮಂಜುನಾಥ್ ಉಪನ್ಯಾಸ ನೀಡುವರು ಎಂದು ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘದ ಕಾರ್ಯದರ್ಶಿ ಅಂದನೂರು ರಾಜೇಶ್ ತಿಳಿಸಿದ್ದಾರೆ.

## ಪ್ರಿಯಾಂಕ ಖರ್ಗೆ ಪ್ರತಿಕೃತಿ ದಹಿಸಿ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ದಾವಣಗೆರೆ, ಆ.18- ರಾಜ್ಯ ಸರ್ಕಾರವನ್ನು ಟೀಕಿಸುವ ಭರದಲ್ಲಿ ಲಂಚ-ಮಂಚ ಪದ ಪ್ರಯೋಗಿಸುವ ಮೂಲಕ ಮಹಿಳೆಯರಿಗೆ ಶಾಸಕ ಪ್ರಿಯಾಂಕ ಖರ್ಗೆ ಅವಮಾನಿಸಿದ್ದಾರೆ ಎಂದು ಆರೋಪಿಸಿ, ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ನಗರದ ಜಯದೇವ ವೃತ್ತದಲ್ಲಿ ಇಂದು ಪ್ರಿಯಾಂಕ ಖರ್ಗೆ ಪ್ರತಿಕೃತಿ ದಹಿಸಿ, ಪ್ರತಿಭಟನೆ ನಡೆಸಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ಮಹೇಶ್ ಮಾತನಾಡಿ, ಪ್ರಿಯಾಂಕ ಖರ್ಗೆ ಇಲಾಖೆಗಳ ನೇಮಕಾತಿ ಪರೀಕ್ಷೆಗಳಲ್ಲಿ ಹಗರಣಗಳು ನಡೆಯುತ್ತಿದ್ದು, ರಾಜ್ಯ ಸರ್ಕಾರವು ಹುದ್ದೆಗಳ ಮಾರಾಟಕ್ಕೆ ನಿಂತಿದೆ. ಯುವತಿಯರಿಗೆ ಉದ್ಯೋಗ ಬೇಕೆಂದರೆ ಮಂಚ ಹತ್ತಬೇಕು, ಯುವಕರಿಗೆ ಉದ್ಯೋಗ ಬೇಕೆಂದರೆ ಲಂಚ ಕೊಡಬೇಕೆಂದು ಹೇಳಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉದ್ಯೋಗ ಬೇಕೆಂದರೆ ಲಂಚ-ಮಂಚಕ್ಕೆ ಸಿದ್ಧವಾಗಿರಬೇಕೆಂಬ ಹೇಳಿಕೆ ನೀಡುವ ಮೂಲಕ ಪ್ರಿಯಾಂಕ ಖರ್ಗೆ ತಮ್ಮ ಸಂಸ್ಕೃತಿ, ಸಂಸ್ಕಾರ ಎಂತಹದ್ದು, ಹೆಣ್ಣು ಮಕ್ಕಳಿಗೆ ಅದ್ಯಾವ ಪರಿ ಗೌರವ ನೀಡುತ್ತಾರೆಂಬುದನ್ನು ಜಗಜ್ಜಾಹೀರುಗೊಳಿಸಿದ್ದಾರೆ ಎಂದು ಕಿಡಿಕಾರಿದರು.

ಪ್ರಿಯಾಂಕ ಖರ್ಗೆ ಅವರು ಸಮಸ್ತ ಮಹಿಳೆಯರಿಗೆ ಪ್ರಿಯಾಂಕ ಖರ್ಗೆ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು. ಪ್ರಿಯಾಂಕ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಪುಷ್ಪಾ ವಾಲಿ, ಭಾಗ್ಯ ಪಿಸಾಳೆ, ಚಂದ್ರಿಕಾ, ಜ್ಯೋತಿ, ಗೌರಮ್ಮ, ದಾಕ್ಷಾಯಿಣಿ, ಚಂದ್ರಕಲಾ, ಜಯಲಕ್ಷ್ಮಿ, ಸರಸ್ವತಿ, ನಯನ, ಮಧುಮತಿ, ಮಂಜುಳಾ ಗದುಗೆ, ಶಾರದಾ ಅಯ್ಯರ್, ಲೀಲಾವತಿ ಸೇರಿದಂತೆ ಇತರರು ಭಾಗವಹಿಸಿದ್ದರು.


## ಕೆರೆಗೆ ಬಿದ್ದು ಪ್ರೇಮಿಗಳ ಆತ್ಮಹತ್ಯೆ

ದಾವಣಗೆರೆ, ಆ.18- ಬೆಂಗಳೂರಿನಿಂದ ಬಂದಿದ್ದ ಪ್ರೇಮಿಗಳಿಬ್ಬರು ಚನ್ನಗಿರಿ ತಾಲ್ಲೂಕಿನ ಬೆಂಕಿಕೆರೆ ಗ್ರಾಮದ ಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದು, ಮೃತದೇಹಗಳು ಗುರುವಾರ ಪತ್ತೆಯಾಗಿವೆ.

ನಾಗರತ್ನ ಮತ್ತು ಚರಣ್ ಈ ಇಬ್ಬರು ನಾಪತ್ತೆ ಆಗಿದ್ದ ಬಗ್ಗೆ ಬೆಂಗಳೂರಿನ ಗೋಪಾಲ ನಗರ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿದೆ. ಮೃತರನ್ನು ನಾಗರತ್ನ ಹಾಗೂ ಚರಣ್ ಎನ್ನಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಎಸ್ಪಿ ಸಿ.ಬಿ. ರಿಷ್ಯಂತ್, ಮೃತರು ಕೈಗೆ ವೇಲ್ ಸುತ್ತಿಕೊಂಡು ನೀರಿಗೆ ಬಿದ್ದು ಮೃತಪಟ್ಟಿದ್ದಾರೆ. ಇವರು ನೀರಿಗೆ ಬೀಳುವ ಮುನ್ನ ನೀರಿನಲ್ಲಿ ಆಟ ಆಡುತ್ತಿದ್ದದ್ದನ್ನು ವ್ಯಕ್ತಿಯೊಬ್ಬ ನೋಡಿದ್ದಾನೆ ಎಂದು ತಿಳಿಸಿದ್ದಾರೆ. ನಾಗರತ್ನ ಆಧಾರ್ ಕಾರ್ಡ್ ಮಾಡಿಸುವ ಕೇಂದ್ರವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಚರಣ್ ಆಧಾರ್ ಕಾರ್ಡ್ ಮಾಡಿಸಲು ಬಂದಾಗ ಚರಣ್ ಹಾಗೂ ನಾಗರತ್ನ ಇಬ್ಬರು ಪರಿಚಯವಾಗಿದ್ದು, ನಂತರ ಪ್ರೀತಿಗೆ ತಿರುಗಿ ಇದೀಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚರಣ್ ಎನ್ನುವ ವ್ಯಕ್ತಿ ಟಿವಿಎಸ್ ಕಂಪನಿಯಲ್ಲಿ ಮೇಲ್ವಿಚಾರಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ನಾಗರತ್ನಳ ಗಂಡ ಪ್ರಸನ್ನ ಪೀಣ್ಯದ ಕೈಗಾರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಎಂದು ಮಾಹಿತಿ ನೀಡಿದ್ದಾರೆ. ತನಿಖೆ ನಂತರ ಸತ್ಯಾಂಶ ತಿಳಿಯಲಿದೆ ಎಂದು ರಿಷ್ಯಂತ್ ತಿಳಿಸಿದ್ದಾರೆ.

## ಆಂಜನೇಯನಿಗೆ ತ್ರಿವರ್ಣ ಧ್ವಜದ ಅಲಂಕಾರ



ಮಲೇಬೆನ್ನೂರು, ಆ.18- ಹೊಳೆಸಿರಿಗೆರೆ ಗ್ರಾಮದಲ್ಲಿ ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಶ್ರೀ ಆಂಜನೇಯ ಸ್ವಾಮಿಗೆ ತ್ರಿವರ್ಣ ಧ್ವಜದ ಬಣ್ಣಗಳ ಅಲಂಕಾರ ಮಾಡಲಾಗಿತ್ತು.

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜು, ದಾವಣಗೆರೆ
ಬೇಕಾಗಿದ್ದಾರೆ
* M.Sc., Nursing * M.Sc., Microbiology
* M.Sc., Pathology * M.Com
* Diploma/Engineering in CS
ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು
ವಿಳಾಸ : ಲುಂಬಿನಿ ಪ್ಯಾರಾ ಮೆಡಿಕಲ್ ಕಾಲೇಜು,
2ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಲತಾ ನರ್ಸಿಂಗ್ ಹೋಂ ಹತ್ತಿರ,
ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ -02.
63604 91454, 99020 55335

ಕಾಲ್ ಸೆಂಟರ್‌ಗೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ
ಔಷಧಿ ಅಂಗಡಿಯಲ್ಲಿ 1ರಿಂದ 2 ವರ್ಷ ಕೆಲಸ ಮಾಡಿ, ಅನುಭವ ಇರುವ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸ್ಟೋರ್ ಹಾಗೂ ಗೋಡೌನ್‌ನಲ್ಲಿ ಸ್ಟಾಕ್ ತೆಗೆಯಲು
PUC / ITI / DIPLOMA
ಆದ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ESI/PF, ಗ್ರಾಚ್ಯುಟಿ, ಬೋನಸ್ ಸೌಲಭ್ಯದೊಂದಿಗೆ ಮಧ್ಯಾಹ್ನ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಇರುತ್ತದೆ.
ಎ.ಕೆ. ಫಾರ್ಮಾ ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ. M : 96117 26499, 88678 57260

## ನಗರದಲ್ಲಿ ಇಂದು ಕಂಠಿದುರ್ಗಮ್ಮ ದೇವಿಯ ಗಂಗಾಪೂಜೆ

ಕೆಟಿಜೆ ನಗರದ 10 ತಿರುವಿನಲ್ಲಿರುವ ಶ್ರೀ ಕಂಠಿದುರ್ಗಮ್ಮ ದೇವಿಯ ಗಂಗಾ ಪೂಜೆ ಇಂದು ಬೆಳಿಗ್ಗೆ 9 ಗಂಟೆಗೆ ಹರಿಹರ ತುಂಗಭದ್ರಾ ನದಿ ತಟದಲ್ಲಿ ನಡೆಯಲಿದೆ ಎಂದು ಕೆಟಿಜೆ ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯ ದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ
ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1405/2022–23 ದಿನಾಂಕ: 18.08.2022
ಮ್ಯಾನ್ಯುವಲ್ ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 05/2022–23
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಮಲೆಬೆನ್ನೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–01ಕ್ಕೆ (ಶಾಶ್ವತ ಸ್ಥಳ 05 ವರ್ಷ) ಹಾಗೂ ಹರಿಹರ ಬಸ್ ನಿಲ್ದಾಣದ ನಾಣ್ಯ ಚಾಲಿತ ಮಾನವ ತೂಕದ (ತೆರೆದ ಸ್ಥಳ 03 ವರ್ಷ) ಯಂತ್ರಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.
ಜಗಳೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–02 ಮತ್ತು ಜನರಲ್ ಮಳಿಗೆ ಸಂಖ್ಯೆ–03ಕ್ಕೆ (ಶಾಶ್ವತ ಸ್ಥಳ 05 ವರ್ಷ) ಪರವಾನಗಿದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 18.08.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ಅಧೀಕ್ಷಕರು – 7022030183
ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ದಾವಣಗೆರೆ ವಿಭಾಗ
ವಾಸಾಸಂಇ/ವಾಪ್ರ/ಎಲ್‌ಸಿ/1843/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ
6 ಅಡಿ ದೈಹಿಕ ಅಂತರ ಪಾಲಿಸಿ
ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಾವಣಗೆರೆ ಜಿಲ್ಲಾ ಶಿಶು ಕಲ್ಯಾಣ ಮಂಡಳಿ
ಸಿ.ಕೆ. ಬಿಲ್ಡಿಂಗ್, 6ನೇ ಮುಖ್ಯ ರಸ್ತೆ, ಎಂ.ಸಿ.ಎ ಬ್ಲಾಕ್, ಶ್ಯಾಮನೂರು ಟ್ಯಾಂಕ್ ಪಾರ್ಕ್ ಎದುರು, ದಾವಣಗೆರೆ.
ಬೇಕಾಗಿದ್ದಾರೆ
ನಮ್ಮ ಸಂಸ್ಥೆಯಿಂದ ನಡೆಯುತ್ತಿರುವ ವಸತಿ ಗೃಹಕ್ಕೆ ಈ ಕೆಳಕಂಡ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು.
1) ಮಹಿಳಾ ವಾರ್ಡನ್ ಹುದ್ದೆ-1 ಪಿಯುಸಿ ವಿದ್ಯಾರ್ಹತೆ ಹೊಂದಿರುವ 35 ವರ್ಷ ಮೇಲ್ಪಟ್ಟವರಾಗಿರಬೇಕು ಹಾಗೂ ವಸತಿ ಗೃಹದಲ್ಲಿ ವಾಸಿಸುವಂತವರು ಬೇಕಾಗಿದ್ದಾರೆ. 2) ಜವಾನ-1 (SSLC ಪಾಸಾಗಿರಬೇಕು) ದಂಪತಿಗೆ ಮಾತ್ರ ಅವಕಾಶವಿದ್ದು ಇವರಿಗೆ ವಸತಿ ಸೌಕರ್ಯವನ್ನು ಒದಗಿಸಲಾಗುವುದು. 3) ಅಡುಗೆಯವರು-3.
ಸಂದರ್ಶನ ದಿನಾಂಕ : 20.08.2022 ಶನಿವಾರ ಬೆಳಿಗ್ಗೆ 11.00 ಘಂಟೆಗೆ
ಹೆಚ್ಚಿನ ಮಾಹಿತಿಗಾಗಿ : ಫೋನ್ : 94489 48450
ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.
ಶ್ರೀಮತಿ ಉಷಾ ರಂಗನಾಥ್ ಅಧ್ಯಕ್ಷರು
ಶ್ರೀಮತಿ ಶೋಭ ರವಿ ಕಾರ್ಯದರ್ಶಿ

ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ
ನಂ. 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ-577 001.
ಐದನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನೆಗಳು
ಸನ್ಮತಿ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಇದರ 2021-2022ನೇ ಸಾಲಿನ ಐದನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 21.08.2022ನೇ ಭಾನುವಾರ ಬೆಳಗ್ಗೆ 11.30 ಗಂಟೆಗೆ ಸಂಘದ ಸಂಸ್ಥಾಪಕಾಧ್ಯಕ್ಷರಾದ ಟಿ.ಎಂ. ಪಾಲಾಕ್ಷ ಅವರ ಅಧ್ಯಕ್ಷತೆಯಲ್ಲಿ ದಾವಣಗೆರೆ ನಗರದ ರೋಟರಿ ಬಾಲ ಭವನದಲ್ಲಿ ಏರ್ಪಡಿಸಲಾಗಿದೆ. ಆದ ಪ್ರಯುಕ್ತ ಮಾನ್ಯ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.
ದಿನಾಂಕ : 30.07.2022 ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ದಾವಣಗೆರೆ. ಸಹಿ/- (ಮಹಮ್ಮದ್ ಉಬೇದುಲ್ಲಾ), ಮುಖ್ಯ ಕಾರ್ಯದರ್ಶಿ
ಸೂಚನೆ : ಮಹಾಸಭೆಗೆ ಇಟ್ಟಿರುವ ವಿಷಯಗಳ ಬಗ್ಗೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಮಹಾಸಭೆಗೆ ಐದು ದಿನಗಳ ಮುಂಚಿತವಾಗಿ ಲಿಖಿತದ ಮೂಲಕ ಸಂಘದ ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಿದಲ್ಲಿ, ಅಂತಹ ವಿಷಯಗಳ ಬಗ್ಗೆ ಅಧ್ಯಕ್ಷರ ಅನುಮತಿ ಪಡೆದು ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯಗಳನ್ನು ಚರ್ಚಿಸಲು ಅವಕಾಶವಿರುವುದಿಲ್ಲ.
ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರುಗಳು ಇದನ್ನೇ ಆಹ್ವಾನವೆಂದು ಭಾವಿಸಿ, ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.

# ಮಲೇಬೆನ್ನೂರಿನಲ್ಲಿ ರಕ್ಷಾಬಂಧನ ಆತ್ಮೀಯತೆಯ ಬೆಸುಗೆ

ಮಲೇಬೆನ್ನೂರು, ಆ. 18 - ಬದುಕಿನ ಎಲ್ಲಾ ಬಂಧನಗಳಲ್ಲಿ ದುಃಖ, ಅಶಾಂತಿ, ಬೇಸರ, ಒತ್ತಡ ಇದ್ದರೆ, ಈ ರಕ್ಷಾ ಬಂಧನದಲ್ಲಿ ಮಾತ್ರ ಆತ್ಮೀಯತೆ ಬೆಳೆಸುವ ಬೆಸುಗೆ ಇರುತ್ತದೆ ಎಂದು ಹುಬ್ಬಳ್ಳಿ ನವ ನಗರದ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಾ ಕುಮಾರಿ ವಿಜಯ ಅವರು ವಿಶ್ಲೇಷಿಸಿದರು.



ಪಟ್ಟಣದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ರಕ್ಷಾ ಬಂಧನ ಹಾಗೂ ಶ್ರೀ ಕೃಷ್ಣ ಜನ್ಮಾಷ್ಟಮಿ ಮತ್ತು ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪುರಸಭೆಯ ನೂತನ ಸದಸ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಈ ರಕ್ಷಾ ಬಂಧನದಲ್ಲಿ ಸಂಬಂಧ, ಬಾಬಾನ ಪ್ರೀತಿಯ ಶ್ರೀರಕ್ಷೆ. ಸ್ವಾತಂತ್ರ್ಯತೆ ಇರುತ್ತದೆ. ಭಗವಂತನ ಬಗ್ಗೆ ಪ್ರೇಮ ಬೆಳೆಸಿಕೊಂಡರೆ ದೇಶಪ್ರೇಮ ಬೆಳೆಸಿಕೊಂಡಂತೆ ಎಂದ ವಿಜಯಕ್ಕನವರು ಸರ್ವಗುಣಗಳಿಂದ ಸರ್ವಶಕ್ತಿಗಳಿಂದ ಸರ್ವ ಸಂಪನ್ನರಾಗಿ ನಮ್ಮನ್ನು ರೂಪಿಸಿರುವ ಪರಮಾತ್ಮನನ್ನು ಪ್ರತಿ ಕ್ಷಣವೂ ನೆನೆಯಬೇಕೆಂದರು.

2 ವರ್ಷ ಹೆಮ್ಮಾರಿ ಕೊರೊನಾ ಬಂಧನದಲ್ಲಿದ್ದ ನಾವೆಲ್ಲರೂ ಯಾವ ಕಾರ್ಯಕ್ರಮವನ್ನು ಮಾಡಿ ಸಂಭ್ರಮ ಪಟ್ಟಿರಲಿಲ್ಲ. ಈಗ ಕೊರೊನಾದಿಂದ ಮುಕ್ತರಾಗಿ ದೇಶದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿದ ತೃಪ್ತಿ ಎಲ್ಲರಿಗೂ ಸಿಕ್ಕಿದೆ ಎಂದು ಸಂಸ್ಥೆಯ ಹರಿಹರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವದೇವಿ ಹೇಳಿದರು.

ಈ ವೇಳೆ ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಭೋವಿ ಶಿವು, ಖಲೀಲ್, ಮಾಜಿದ್, ಸಾಬೀರ್ ಅಲಿ, ನಯಾಜ್, ಚಮನ್, ಶ್ರೀಮತಿ ವಿಜಯಲಕ್ಷ್ಮಿ ಕೆ. ಪಿ. ಗಂಗಾಧರ್, ಶ್ರೀಮತಿ ಸುಧಾ ಪಿ.ಆರ್. ರಾಜು, ಶಬ್ಬೀರ್ ಖಾನ್, ಟಿ. ಹನುಮಂತಪ್ಪ, ಓ.ಜಿ. ಕುಮಾರ್, ಎಂ.ಬಿ. ರುಸ್ತುಂ, ಭೋವಿಕುಮಾರ್, ಬಿ. ಸುರೇಶ್, ಎ.ಕೆ. ಲೋಕೇಶ್, ಟಿ. ವಾಸಪ್ಪ ಅವರನ್ನು ಸನ್ಮಾನಿಸಲಾಯಿತು.

ಮಲೇಬೆನ್ನೂರು ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೊಳೆಸಿರಿಗೆರೆ ಕೇಂದ್ರದ ಸಂಚಾಲಕರಾದ ಬ್ರಹ್ಮಾಕುಮಾರಿ ಶಾಂತಾ ಸ್ವಾಗತಿಸಿದರು.

ರಾಜಯೋಗ ಶಿಕ್ಷಕರಾದ ಬಿ.ಕೆ. ಸಾವಿತ್ರ, ಬಿ.ಕೆ. ಆಶಾ, ಬಿ.ಕೆ. ಗುರುನಾಥ್ ಹೆಗಡೆ, ಬಿ. ಪಂಚಪ್ಪ, ಹೆಚ್.ಎಸ್. ರುದ್ರಯ್ಯ, ಬಿ.ಕೆ. ದೊಡ್ಡಬಸಣ್ಣ, ಪೂಜಾರ್ ರೇವಣಪ್ಪ, ದಂಡಿ ಹನುಮಂತಪ್ಪ ಮತ್ತಿತರರು ಭಾಗವಹಿಸಿದ್ದರು.

ಈ ವೇಳೆ ಪುಟಾಣಿ ಮಕ್ಕಳು ಕೃಷ್ಣನ ವೇಷಧಾರಿಗಳಾಗಿ ಗಮನ ಸೆಳೆದರು.

# ದೊಡ್ಡ ಪ್ರಮಾಣದಲ್ಲಿ ಬ್ಯಾಂಕುಗಳ ಖಾಸಗೀಕರಣ ಕೆಡುಕು: ಆರ್‌ಬಿಐ

ಮುಂಬೈ, ಆ. 18 – ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಗೊಳಿ ಸುವುದರಿಂದ ಒಳಿತಿಗಿಂತ ಕೆಡುಕೇ ಆಗುತ್ತದೆ ಎಂದು ರಿಸರ್ವ್ ಬ್ಯಾಂಕ್ ಲೇಖನವೊಂದರಲ್ಲಿ ಎಚ್ಚರಿಸಲಾಗಿದೆ.

ಖಾಸಗಿ ಬ್ಯಾಂಕುಗಳು ಲಾಭ ಗಳಿಸುವಲ್ಲಿ ಹೆಚ್ಚು ದಕ್ಷವಾಗಿವೆ. ಸರ್ಕಾರಿ ಬ್ಯಾಂಕುಗಳು ಹಣಕಾಸು ಒಳಗೊಳ್ಳುವಿಕೆಗೆ ಉತ್ತಮ ಉತ್ತೇಜನ ನೀಡುತ್ತಿವೆ ಎಂದು ಆರ್.ಬಿ.ಐ. ಬುಲೆಟಿನ್‌ನಲ್ಲಿ ಪ್ರಕಟವಾದ ಲೇಖನದಲ್ಲಿ ತಿಳಿಸಲಾಗಿದೆ.

ಖಾಸಗೀಕರಣ ಹೊಸ ಪರಿಕಲ್ಪನೆಯೇನೂ ಅಲ್ಲ. ಇದರಿಂದ ಆಗುವ ಒಳಿತು ಹಾಗೂ ಕೆಡುಕುಗಳ ಬಗ್ಗೆ ತಿಳಿದಿದೆ. ಖಾಸಗೀಕರಣದ ವೇಳೆ ಸರಿ ಯಾದ ಎಚ್ಚರಿಕೆ ವಹಿಸಬೇಕಾಗು ತ್ತದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಸರ್ಕಾರ ಹಂತ ಹಂತವಾಗಿ ಖಾಸಗೀಕರಣ ನಡೆಸುವುದರಿಂದ, ಹಣಕಾಸು ಒಳಗೊಳ್ಳುವಿಕೆಯ ಸಾಮಾಜಿಕ ಗುರಿಯನ್ನು ಈಡೇರಿಸಲು ಸಾಧ್ಯವಾಗುತ್ತದೆ ಎಂದು ರಿಸರ್ವ್ ಬ್ಯಾಂಕ್ ಅಭಿಪ್ರಾಯ ಪಟ್ಟಿದೆ.

ಬ್ರೆಜಿಲ್, ಚೀನ, ಜರ್ಮನಿ, ಜಪಾನ್ ಮತ್ತು ಯುರೋಪ್ ಒಕ್ಕೂಟಗಳಲ್ಲಿ ಕೈಗಾರಿಕೆಗಳು ಪರಿಸರ ಸ್ನೇಹಿಯಾಗಿ ಪರಿವರ್ತನೆಗೊಳ್ಳುವಲ್ಲಿ ಸರ್ಕಾರಿ ಬ್ಯಾಂಕುಗಳು ಸಾಕಷ್ಟು ನೆರವಾಗಿವೆ.

ಲಾಭ ಗಳಿಸುವುದೇ ಸರ್ಕಾರಿ ಬ್ಯಾಂಕುಗಳ ಏಕೈಕ ಉದ್ದೇಶವಾಗಿರುವುದಿಲ್ಲ. ಹೀಗಾಗಿ ಹಣಕಾಸು ಒಳಗೊಳ್ಳುವಿಕೆಯ ಗುರಿ ತಲುಪುವಲ್ಲಿ ಈ ಬ್ಯಾಂಕುಗಳು ಸಹಕಾರಿ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.


## ರಾಯಚೂರು ತೆಲಂಗಾಣಕ್ಕೆ ಸೇರಿಸಲು ಒತ್ತಾಯ

### ರಾವ್ ಹೇಳಿಕೆ ರಾಜಕೀಯ ಪ್ರೇರಿತ

ಬೆಂಗಳೂರು, ಆ. 18 – ತೆಲಂಗಾಣದ ಅಭಿವೃದ್ಧಿಯನ್ನು ಪರಿಗಣಿಸಿರುವ ರಾಯಚೂರು ಜನರು, ತಮ್ಮ ಜಿಲ್ಲೆಯನ್ನೂ ತೆಲಂಗಾಣಕ್ಕೆ ಸೇರಿಸುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಹೇಳಿಕೆ ನೀಡಿರುವುದು ರಾಜಕೀಯ ಪ್ರೇರಿತ ಎಂದು ಜವಳಿ ಸಚಿವ ಶಂಕರ್ ಬಿ. ಮುನೇನಕೊಪ್ಪ ಹೇಳಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಯಚೂರು ಹಾಗೂ ಯಾದಗಿರಿಗಳನ್ನು ಆದ್ಯತಾ ಜಿಲ್ಲೆಗಳಾಗಿ ಗುರುತಿಸಿದ್ದಾರೆ. ರಾಯಚೂರು ಅಭಿವೃದ್ಧಿಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಮುನೇನಕೊಪ್ಪ ಹೇಳಿದ್ದಾರೆ.

ತೆಲಂಗಾಣ ಮುಖ್ಯಮಂತ್ರಿ ರಾವ್ ಹೇಳಿಕೆ ರಾಜಕೀಯ ಪ್ರೇರಿತ. ಹೀಗಾಗಿ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡುವ ಅಗತ್ಯವಿಲ್ಲ ಎಂದಿದ್ದಾರೆ.




WANTED

B.Com, M.Com Graduator

Minimum - 3 years Experience

Contact :

70220 04042 99806 29965










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte